ಸಂಪುಟ : 8 ಸಂಚಿಕೆ :292 ಪುಟ : 4 ಬೆಲೆ : 3.00 ರವಿವಾರ ಡಿಸೆಂಬರ್ 31, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 292 Pages : 4 Price : 3.00 Sunday December 31, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಎಚ್.ಕೆ. ಪಾಟೀಲ ಸೂಚನೆ

# ಅಸಮರ್ಪಕ ನೀರು ಪೂರೈಸುವ ಏಜೆನ್ಸಿಗಳ ಮೇಲೆ ಕ್ರಮ ಜರುಗಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಜನವಸತಿ ಪ್ರದೇಶಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆ ಮಾಡುತ್ತಿರುವ ಏಜೆನ್ಸಿಯವರ ಮೇಲೆ ಜಿಲ್ಲಾಧಿಕಾರಿಗಳು ಸಂಪೂರ್ಣ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಡಾ. ಎಚ್.ಕೆ. ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶನಿವಾರ ಜರುಗಿದ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು, ಜಿಲ್ಲೆಯ ಎಲ್ಲ ಜನ ವಸತಿಗಳಿಗೆ ಕುಡಿಯುವ ನೀರು ಪೂರೈಕೆಗಾಗಿ ಯೋಜನೆ ಜಾರಿಯಲ್ಲಿದೆ. ಯೋಜನೆಯ ಅನುಸಾರ ಗ್ರಾಮಗಳಿಗೆ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆ ಮಾಡುತ್ತಿರುವ ಕುರಿತು ಸಂಬಂಧಿತ ಏಜೆನ್ಸಿಗಳೇ ಒಪ್ಪಿಕೊಂಡಿದ್ದಾರೆ. ಅಲ್ಲದೇ ಗರಿಷ್ಠ ಪ್ರಮಾಣದ ನೀರು ಪೂರೈಕೆ ಮಾಡುತ್ತಿರುವ ಬಗ್ಗೆ ಸರ್ಕಾರದಿಂದ ಅನುದಾನ ಪಡೆದು ಜನಸಾಮಾನ್ಯರಿಗೆ ಸಮರ್ಪಕ ನೀರು ಪೂರೈಕೆ ಮಾಡುತ್ತಿಲ್ಲ. ಇಂತಹ ಏಜೆನ್ಸಿಗಳ ಮೇಲೆ ಸಂಪೂರ್ಣ ತನಿಖೆಯನ್ನು ಜರುಗಿಸಿ, ಕೂಡಲೇ ಸಂಬಂಧಿಸಿದ ಏಜೆನ್ಸಿಯವರಿಗೆ ಪಾವತಿಸಬೇಕಾದ ಮೊತ್ತವನ್ನು ತಡೆ ಹಿಡಿದು ನಿಗದಿತ ಪ್ರಮಾಣಕ್ಕಿಂತ ಕಡಿಮೆ ನೀರು ಪೂರೈಕೆಯಾದಲ್ಲಿ ಈಗಾಗಲೇ ಪಾವತಿಯಾದ ಮೊತ್ತವನ್ನು ಮರಳಿ ಪಡೆಯುವಂತೆ ಸೂಚನೆ ನೀಡಿದರು.



## ಅರ್ಹರಿಗೆ ಬೆಳೆ ವಿಮೆ ಪರಿಹಾರ ದೊರಕಲಿ

ಬೆಳೆ ವಿಮೆ ಕುರಿತು ರೈತರಿಗೆ ಸರಿಯಾದ ಮಾಹಿತಿ ನೀಡುವದು ಅಧಿಕಾರಿಗಳ ಜವಾಬ್ದಾರಿ. ರೈತರಿಗೆ ಸೂಕ್ತ ತಿಳುವಳಿಕೆ ನೀಡುವ ಮೂಲಕ ಎಲ್ಲ ರೈತರಿಗೂ ಬೆಳೆ ವಿಮೆಯ ಸೌಲಭ್ಯ ದೊರಕುವಂತಾಗಬೇಕು ಎಂದರು. ಬೆಳೆ ವಿಮೆ ಪಾತಿಸಿದ ರೈತರಿಗೆ ನಿಜವಾಗಿಯೂ ಬೆಳೆ ಹಾನಿಯಾಗಿದ್ದಲ್ಲಿ ಸಮೀಕ್ಷೆ ಕೈಗೊಂಡು, ಅರ್ಹ ರೈತರಿಗೆ ಬೆಳೆ ವಿಮೆ ಪರಿಹಾರ ದೊರಕುವಂತಾಗಬೇಕು. ಈ ಕುರಿತು ಕೃಷಿ ಇಲಾಖೆ ಅಧಿಕಾರಿಗಳು ಗಮನ ಹರಿಸುವಂತೆ ಸಚಿವ ಎಚ್.ಕೆ. ಪಾಟೀಲ ತಾಕೀತು ಮಾಡಿದರು.

ಗ್ರಾಮೀಣ ಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಉಸ್ತುವಾರಿಯವನ್ನು ಗ್ರಾಮ ಪಂಚಾಯತಗಳಿಗೆ ನೀಡಲಾಗಿದ್ದು, ಶಾಲೆಗಳಲ್ಲಿನ ಘಟಕಗಳ ದುರಸ್ತಿ ಕಾರ್ಯವನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ನೋಡಿಕೊಳ್ಳುವಂತೆ ತಿಳಿಸಿದರು.

**ತಾಂಡಾ ಮಕ್ಕಳಿಗಾಗಿ ವಸತಿ ನಿಲಯ:** ಜಿಲ್ಲೆಯಲ್ಲಿ ಸುಮಾರು 20ಕ್ಕೂ ಅಧಿಕ ತಾಂಡಾಗಳಿದ್ದು ಅಲ್ಲಿಯ ಜನ ವಲಸೆ ಹೋಗುವದನ್ನು ಗಮನದಲ್ಲಿಟ್ಟುಕೊಂಡು ಅಂಥವರ ಮಕ್ಕಳು ಶಾಲೆಯಿಂದ ದೂರವಾಗದಂತೆ ಅಗತ್ಯದ ವಸತಿ ನಿಲಯಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು. ಅಲ್ಲದೇ ಜಿಲ್ಲೆಯಲ್ಲಿನ ವಸತಿ ನಿಯಲಗಳಿಗೆ ಕಂಪೌಂಡ್ ಗೋಡೆಗಳನ್ನು ನಿರ್ಮಿಸಲು ಸಭೆಯಲ್ಲಿ ಸೂಚಿಸಲಾಯಿತು.

**ಟೆಂಡರ್ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳಿಸಿ:** ಪ್ರಸಕ್ತ ಆರ್ಥಿಕ ವರ್ಷ ಕೊನೆಯಾಗುತ್ತಿದೆ. ಮಾರ್ಚ್ ಮಾಹೆಯಲ್ಲಿ ಲೋಕಸಭಾ ಚುನಾವಣೆ ಘೋಷಣೆ ಆಗುವ ಸಂಭವವಿದ್ದು, ಇಲಾಖೆಗಳಲ್ಲಿನ ಟೆಂಡರ್ ಪ್ರಕ್ರಿಯೆಯನ್ನು ಫೆಬ್ರುವರಿ ಅಂತ್ಯದೊಳಗಾಗಿ ಪೂರ್ಣಗೊಳಿಸಿ ಕಾರ್ಯಾದೇಶ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಸಚಿವ ಎಚ್.ಕೆ. ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

▶▶ 3ನೇ ಪುಟಕ್ಕೆ

## ಜಿಲ್ಲೆಯ ಎಸ್ಎಸ್ಎಲ್‌ಸಿ ಫಲಿತಾಂಶ ಸುಧಾರಿಸಿ

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ಕೈಗೊಳ್ಳಲಾದ ಕ್ರಮಗಳ ಕುರಿತು ಮಾಹಿತಿ ಪಡೆದ ಸಚಿವರು, ಜಿಲ್ಲೆಯನ್ನು 15ನೇ ಸ್ಥಾನದೊಳಗೆ ಬರುವಂತೆ ಪ್ರಯತ್ನಿಸುವಂತೆ ಸೂಚಿಸಿದರು. ಇದಕ್ಕೆ ಸಚಿವರಿಗೆ ಮಾಹಿತಿ ಒದಗಿಸಿದ ಡಿ.ಡಿ.ಪಿ.ಆಯ್. ಆರ್.ಎ. ರಡ್ಡೇರ, ಫಲಿತಾಂಶ ಸುಧಾರಣೆಗಾಗಿ ಈಗಾಗಲೇ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಿಕ್ಷಕರಿಗೆ ಎರಡು ದಿನ ತರಬೇತಿ ನೀಡಲಾಗಿದೆ. ಹಾಗೂ ಮೈಕ್ರೋಪ್ಲಾನ್ ಸಿದ್ದಗೊಳಿಸಿದ್ದು ಶೀಘ್ರ ಅನುಷ್ಠಾನಗೊಳಿಸಲಾಗುವು ಎಂದರು. ನಂತರ ಸಚಿವರು ಶಾಲೆಗಳ ಮೂಲ ಸೌಲಭ್ಯಗಳಿಗಾಗಿ ಅನುದಾನ ಬಿಡುಗಡೆ ಆಗಿರುತ್ತದೆ. ಶಾಲೆಗಳಲ್ಲಿ ಮುಖ್ಯವಾಗಿ ಹೊಸ ಕೊಠಡಿಗಳ ನಿರ್ಮಾಣ ಹಾಗೂ ಶೌಚಾಲಯಗಳ ನಿರ್ಮಾಣಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಜರುಗುವ ಸಭೆ–ಸಮಾರಂಭಗಳಲ್ಲಿ ಮಕ್ಕಳನ್ನು ಬಳಸದಂತೆ ನಿರ್ಬಂಧಿಸಲು ತಿಳಿಸಿದರು.

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 31 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 29 ರಲ್ಲಿ ಪಾಪಡಿಯವರ್ ಲೈನ್, ನೆಲ್ಸನ್ ಮಂಡೇಲಾ ಲೈನ್, ವಾರ್ಡ್ ನಂ. 21, 22, 23ರಲ್ಲಿ ಕಗ್ಗನಹಳ್ಳಿ ಅವರ ಲೈನ್, ಹಾರೋಗೇರಿ ಭಾಗ 1,2, ಸೋಮನಗೌಡ ಬನ್ನಿ ಕಾಳಮ್ಮನ ಗುಡಿ ಹತ್ತಿರ ಜಂತ್ಲಿ ಅವರ ಲೈನ್, ಕುಂಬಾರ್ ಲೈನ್, ದಮನ್ ಕಟ್ಟಿ ಲೈನ್ ಭಾಗ–2 ಜಂತ್ಲಿ ಭಾಗ–2 ಸರ್ಕಲ್ ಕೆಲವು ಭಾಗಗಳು,

ವಾರ್ಡ್ ನಂ. 34, 35ರಲ್ಲಿ ಸಿದ್ದು ಪಾಟೀಲ್ ಅವರ ಲೈನ್, ಹುಲಿಯವರು ಲೈನ್, ಚಿದಾನಂದಮಠ ಲೈನ್, ಈಶ್ವರ ಗುಡಿ ಲೈನ್ ಮೂರನೇ ಕ್ರಾಸ್, ಎರಡನೇ ಕ್ರಾಸ್, ಮಾರುತಿ ದೇವಸ್ಥಾನದ ಲೈನ್, ಗಣಪತಿಗುಡಿ ಲೈನ್, ವಾರ್ಡ್ ನಂ. 28ರಲ್ಲಿ ಪಂಚಾಕ್ಷರಿ ನಗರ, ನಾಗಪ್ಪನ ಕಟ್ಟಿ, ನಾಲ್ಕನೇ ಕ್ರಾಸ್, ವಾರ್ಡ್ ನಂ. 15, 16, 17 ರಲ್ಲಿ ಶಹಾಪುರ್ ಪೇಟೆ, ಜವಳಗಲ್ಲಿ, ಮೀನದ್ ಮಾರ್ಕೆಟ್, ಗಣೇಶ ಗುಡಿ ಲೈನ್, ಶರಣಬಸವೇಶ್ವರ ಗುಡಿ ಲೈನ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಡಿಸಿ ಮಿಲ್ ರಸ್ತೆ .

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಚಿವ ಎಚ್.ಕೆ.ಪಾಟೀಲ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ. ಸಭೆ

# ನೀರಿನ ಕೊರತೆ ಆಗದಂತೆ ಕ್ರಮ ಕೈಗೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯನ್ನು ಸಂಪೂರ್ಣ ಬರ ಪೀಡಿತ ಜಿಲ್ಲೆ ಎಂದು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಬರಗಾಲದ ಸಂದರ್ಭದಲ್ಲಿ ಜನ–ಜಾನುವಾರುಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡಬೇಕು. ಈ ಬಗ್ಗೆ ಸಂಬಂಧಿತ ಇಲಾಖೆ ಅಧಿಕಾರಿಗಳು ಗಮನ ಹರಿಸಬೇಕೆಂದು ಸಚಿವ ಎಚ್.ಕೆ. ಪಾಟೀಲ ಸೂಚಿಸಿದರು.

ಅವರು ಶನಿವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಸಕರಾದ ಸಿ.ಸಿ. ಪಾಟೀಲ ಹಾಗೂ ಜಿ.ಎಸ್.ಪಾಟೀಲ ಅವರು ನರಗುಂದ ಹಾಗೂ ರೋಣ ತಾಲೂಕುಗಳಿಗೆ ಮಲಪ್ರಭಾ ನದಿಯಿಂದ ಪೂರೈಕೆಯಾಗುತ್ತಿರುವ ನೀರು ಇನ್ನೆರಡು ತಿಂಗಳಲ್ಲಿ ಕಡಿಮೆ ಆಗಲಿದೆ ಎಂಬ ಮಾಹಿತಿ ಬಂದಿದೆ. ಹೀಗಾಗಿ, ಮುಂದೆ ನರಗುಂದ ಮತ್ತು ರೋಣ ತಾಲೂಕುಗಳಿಗೆ ಕುಡಿಯುವ ನೀರಿನ ಪೂರೈಕೆ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳು ಗಮನಿಸಬೇಕು ಎಂದು ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ. ಪಾಟೀಲ, ಜಿಲ್ಲಾಧಿಕಾರಿಗಳು ಕೂಡಲೇ ನೀರು ಪೂರೈಕೆ ಮಾಡುವ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ಬೇಸಿಗೆ ಮುಗಿಯುವರೆಗೂ ಕುಡಿಯುವ ನೀರನನು ಸಮರ್ಪಕವಾಗಿ ಪೂರೈಸುವ ಬಗ್ಗೆ ಸೂಕ್ತ ಕ್ರಮಗಳನ್ನು ವಹಿಸುವಂತೆ ಸೂಚಿಸಿದರು.

ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಲಕ್ಷ್ಮೇಶ್ವರ ಪಟ್ಟಣಕ್ಕೆ ಸಮರ್ಪಕ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ.

▶▶ 3ನೇ ಪುಟಕ್ಕೆ

## ಕೋವಿಡ್ ನಿರ್ವಹಣೆ

ಜಿಮ್ಸ್ ಆಸ್ಪತ್ರೆಯಲ್ಲಿರುವ 890 ಹಾಸಿಗೆಗಳ ಪೈಕಿ 730 ಆಕ್ಸಿಜನ್ ಹಾಸಿಗೆ ಇದ್ದು, ಇದರಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ 50 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಪ್ರತಿದಿನ 150ರಿಂದ 200 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಈವರೆಗೆ 804 ಪರೀಕ್ಷೆಗಳನ್ನು ಮಾಡಲಾಗಿದ್ದು ಇದರಲ್ಲಿ 6 ಜನರಿಗೆ ಸೋಂಕು ಧೃಡಪಟ್ಟಿದೆ. ಇವರಲ್ಲಿ 5 ಜನ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿಯೂ ಸಹ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಪ್ರತ್ಯೇಕ ಹಾಸಿಗೆಗಳನ್ನು ಮೀಸಲಿಡಲಾಗಿದೆ ಎಂದು ಜಿಮ್ಸ್ ನಿರ್ದೇಶಕ ಡಾ.ಬಸವರಾಜ ಬೊಮ್ಮನಹಳ್ಳಿ ಹಾಗೂ ಡಿ.ಎಚ್.ಓ ಎಸ್. ಎಸ್. ನೀಲಗುಂದ ಸಭೆಗೆ ಮಾಹಿತಿ ಒದಗಿಸಿದರು. ಇದಕ್ಕೆ ಪ್ರತಿಯಾಗಿ ಮಾತನಾಡಿದ ಸಚಿವ ಎಚ್. ಕೆ. ಪಾಟೀಲ, ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಸಮರ್ಪಕವಾಗಿ ಚಿಕಿತ್ಸೆ ದೊರಕಬೇಕು. ಇದಕ್ಕೆ ಅಗತ್ಯವಿರುವ ಎಲ್ಲ ಸಂಪೂರ್ಣ ಸಹಕಾರವನ್ನು ನೀಡಲಾಗುವುದು ಎಂದರು.

## ಆದ್ಯತೆಗನುಸಾರ ಅನುದಾನ ಬಿಡುಗಡೆ



■ ವಿಜಯಸಾಕ್ಷಿ ಸುದ್ದಿ, ಗದಗ

ಲೊಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಶನಿವಾರ ಶಿರಹಟ್ಟಿ ವಿಧಾನಸಭಾ ಮತಕ್ಷೇತ್ರದ ಬಂಕಾಪುರ–ಲಕ್ಷ್ಮೇಶ್ವರ ರಸ್ತೆ ಕಾಮಗಾರಿಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳಲ್ಲಿ ಹದಗೆಟ್ಟಿರುವ ರಸ್ತೆಗಳ ಕುರಿತು ಶಾಸಕ ಡಾ.ಚಂದ್ರು ಲಮಾಣಿ ಗಮನ ಸೆಳೆದಿದ್ದಾರೆ. ಹಂತ ಹಂತವಾಗಿ ರಸ್ತೆ ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ರಸ್ತೆ ಮೇಲ್ದರ್ಜೆಗೇರಿಸಲು ಕೇಂದ್ರ ಸರಕಾರಕ್ಕೆ ವಿನಂತಿ ಮಾಡಲಾಗುವದು ಎಂದರು.

ಅನೇಕ ಅಪಘಾತಗಳ ತಾಣವಾಗಿ ಮಾರ್ಪಟ್ಟಿರುವ ಯಲವಿಗಿ ರೈಲ್ವೆ ಕೆಳ ಸೇತುವೆ ಮೇಲ್ದರ್ಜೆಗೇರಿಸಲು ರಾಜ್ಯ ಸರಕಾರದಿಂದ ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಲಾಗುವದು ಎಂದರಲ್ಲದೆ, ರಸ್ತೆ ಪರಿಸ್ಥಿತಿಯನ್ನು ಕಣ್ಣಾರೆ ವೀಕ್ಷಿಸಿದ ಸಚಿವರು ಅದರ ಸುಧಾರಣೆಗೆ ಸರಕಾರದಿಂದ ವಿಶೇಷ ಅನುಧಾನ ಬಿಡುಗಡೆಗೊಳಿಸುವ ಭರವಸೆ ನೀಡಿದರು.

ಗದಗ ಪರಿವೀಕ್ಷಣಾ ಮಂದಿರದಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಾ, ಇಲಾಖೆ ವತಿಯಿಂದ ಕಾಮಗಾರಿಗಳನ್ನು ನಿರ್ವಹಿಸಲು 4 ಸಾವಿರ ಕೋಟಿ ರೂ. ಅನುದಾನ ಸರಕಾರದ ಹಂತದಲ್ಲಿದ್ದು, ಮಂಜೂರಾತಿ ನೀಡಿದ ತಕ್ಷಣ ಗದಗ ಜಿಲ್ಲೆಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಅನುದಾನ ಒದಗಿಸಲಾಗುವದು ಎಂದರು.

ಈ ಸಂದರ್ಭದಲ್ಲಿ ಶಾಸಕ ಜಿ.ಎಸ್. ಪಾಟೀಲ, ಬಿ.ಬಿ. ಅಸೂಟಿ ಉಪಸ್ಥಿತರಿದ್ದರು.

### ದಿ.ಅಂದಾನೆಪ್ಪ ದೊಡ್ಡಮೇಟಿ ಅವರ ಸಮಾಧಿ ಅಭಿವೃದ್ಧಿಪಡಿಸುವ ಸಭೆಯಲ್ಲಿ ಸಚಿವ ಪಾಟೀಲ

# ದೊಡ್ಡಮೇಟಿಯವರ ಸ್ಮಾರಕ ಅವಿಸ್ಮರಣೀಯವಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕದ ಏಕೀಕರಣದ ರೂವಾರಿ, ಸ್ವಾತಂತ್ರ್ಯ ಹೋರಾಟಗಾರ ದಿ.ಅಂದಾನೆಪ್ಪ ದೊಡ್ಡಮೇಟಿ ಅವರ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸಿ ಅವಿಸ್ಮರಣೀಯ ಸ್ಮಾರಕ ನಿರ್ಮಾಣ ಮಾಡೋಣ ಎಂದು ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ಜರುಗಿದ ದಿ.ಅಂದಾನೆಪ್ಪ ದೊಡ್ಡಮೇಟಿ ಅವರ ಸಮಾಧಿ ಅಭಿವೃದ್ಧಿಪಡಿಸುವ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದಿ.ಅಂದಾನೆಪ್ಪ ದೊಡ್ಡಮೇಟಿ ಅವರು ಕರ್ನಾಟಕ ಏಕೀಕರಣಕ್ಕೆ ಹಾಗೂ ಸ್ವಾತಂತ್ರ್ಯ ಹೋರಾಟ ಸಂಗ್ರಾಮದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಜೀವನದುದ್ದಕ್ಕೂ ಪ್ರಾಮಾಣಿಕತೆ, ನಿಸ್ವಾರ್ಥ ಸೇವೆಯ ಮೂಲಕ ಹೆಸರುವಾಸಿಯಾಗಿದ್ದಾರೆ.



ಮಹಾತ್ಮಾ ಗಾಂಧೀಜಿಯವರು ಗದುಗಿಗೆ ಆಗಮಿಸಿದ ಸಂದರ್ಭದಲ್ಲಿ ಅವರನ್ನು ಜಕ್ಕಲಿಗೆ ಕರೆದೊಯ್ದಿದ್ದಾರೆ. ಮಾಜಿ ಪ್ರಧಾನಿ ದಿ. ಜವಹಾರಲಾಲ ನೆಹರು ಅವರೊಂದಿಗೂ ಸಹ ಒಡನಾಟ ಹೊಂದಿದ್ದರು. ಅವರ ಸಮಾಧಿ ಸ್ಥಳದ ಅಭಿವೃದ್ಧಿಗೆ ಸರ್ಕಾರ ಮುಂದಾಗಿದ್ದು, ಇದೊಂದು ಪ್ರವಾಸಿ ತಾಣವಾಗಿ ಹೊರಹೊಮ್ಮಲಿ ಎಂಬ ಸದಾಶಯ ಹೊಂದಿದ್ದೇವೆ ಎಂದರು.

ರೋಣ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಕರ್ನಾಟಕದ ಏಕೀಕರಣದ ರೂವಾರಿ ದಿ.ಅಂದಾನೆಪ್ಪ ದೊಡ್ಡಮೇಟಿ ಅವರ ಸ್ಮಾರಕ ಭವನ ನಿರ್ಮಾಣ ಕಾರ್ಯಕ್ಕೆ ಪ್ರೋತ್ಸಾಹಿಸಿ, ಅಗತ್ಯ ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಸಚಿವ ಎಚ್. ಕೆ. ಪಾಟೀಲರಿಗೆ ಅಭಿನಂದಿಸಿದರು. ಸರ್ಕಾರದ ಈ ನಿರ್ಧಾರ ಈ ಭಾಗದ ಅಂದಾನೆಪ್ಪ ದೊಡ್ಡಮೇಟಿ ಅವರ ಅಭಿಮಾನಿಗಳಲ್ಲಿ ಹೊಸ ಹುಮ್ಮಸ್ಸು ತಂದಿದೆ. ಇದರಿಂದ ಮುಂದಿನ ಪೀಳಿಗೆಗೆ ಅಂದಾನೆಪ್ಪ ದೊಡ್ಡಮೇಟಿ ಅವರ ಹೋರಾಟ, ಜೀವನ ಪರಿಚಯಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೋಟ್ರೇಶ ವಿಭೂತಿ, ವಾರ್ತಾಧಿಕಾರಿ ವಸಂತ ಮಡ್ಲೂರ, ಗಣ್ಯರಾದ ವಿವೇಕಾನಂದಗೌಡ ಪಾಟೀಲ, ಪ್ರೊ. ಎಚ್.ಎಸ್. ಹುಡೇದ, ರವೀಂದ್ರನಾಥ ದೊಡ್ಡಮೇಟಿ, ಚನ್ನಬಸವ ದೊಡ್ಡಮೇಟಿ, ಸಂದೇಶ ದೊಡ್ಡಮೇಟಿ, ಎಂ.ಎಸ್. ದಡೇಸೂರಮಠ, ಅ.ದ. ಕಟ್ಟಿಮನಿ, ಗಂಗವ್ವ ಜಂಗನ್ನವರ, ಮಲ್ಲಿಕಾರ್ಜುನ ಮೇಟಿ, ಕೆ.ಸಿ. ಕೇಸರಿ ಮತ್ತಿತರರು ಉಪಸ್ಥಿತರಿದ್ದರು.

## ಪ್ರಥಮ ಹಂತದಲ್ಲಿ

ಪ್ರಥಮ ಹಂತದಲ್ಲಿ ಅಂದಾನೆಪ್ಪ ದೊಡ್ಡಮೇಟಿ ಅವರ ಪುತ್ಥಳಿ, ಉತ್ತಮ ಗ್ರಂಥಾಲಯ, ಉದ್ಯಾನವನ, ಸಾಂಸ್ಕೃತಿಕ ಭವನ ಹಾಗೂ ಅಪರೂಪದ ಛಾಯಾಚಿತ್ರಗಳ ಪ್ರದರ್ಶನಗಳ ಸಂಗ್ರಹ ಮಾಡಿ ಅವುಗಳನ್ನು ಜನಸಾಮಾನ್ಯರಿಗೆ ಪ್ರದರ್ಶಿಸಲು ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ಉತ್ತಮವಾದ 3–4 ಪರಿಕಲ್ಪನೆಗಳನ್ನು ರೂಪಿಸಿ, ಅದಕ್ಕೆ ಪರಿಣಿತ ಆರ್ಕಿಟೆಕ್‌ರಿಂದ ನೀಲನಕ್ಷೆ ಶೀಘ್ರವೇ ರೂಪಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ಸಚಿವ ಎಚ್.ಕೆ. ಪಾಟೀಲ ಸೂಚಿಸಿದರು.

## ಸಂಪಾದಕೀಯ

### ಸರಕಾರಿ ಉದ್ಯೋಗ ಮೇಳ ಸ್ವಾಗತಾರ್ಹ

ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವದ ಹೆಜ್ಜೆಯೊಂದನ್ನ ಇಟ್ಟಿದೆ. ಸರ್ಕಾರದ ಆಶ್ರಯದಲ್ಲಿ ಉದ್ಯೋಗ ಮೇಳ ಆಯೋಜಿಸುವ ನಿರ್ಧಾರ, ದುಡಿಯುವ ಕೈಗಳಿಗೆ ಕೆಲಸ ಕೊಡುವ ಬಹುದೊಡ್ಡ ಕಾರ್ಯವಾಗಲಿದೆ.

ಸರ್ಕಾರಿ ಉದ್ಯೋಗ ಮೇಳ ಆಯೋಜನೆಯಿಂದ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗುತ್ತದೆ ಎನ್ನಲು ಸಾಧ್ಯವಿಲ್ಲ. ನಿರುದ್ಯೋಗ ಸಮಸ್ಯೆಗೆ ಸರ್ಕಾರದ ಉದ್ಯೋಗ ಮೇಳ ಪರಿಹಾರವೂ ಅಲ್ಲ. ಆದರೆ ನಿರುದ್ಯೋಗ ಸಮಸ್ಯೆಯನ್ನ ಗಂಭೀರವಾಗಿ ಪರಿಗಣಿಸಿ, ಆ ಸಮಸ್ಯೆಯ ಪರಿಹಾರಕ್ಕೆ ಮುಂದಾಗಿರುವುದು ಮಾತ್ರ ಸ್ವಾಗತಾರ್ಹ.

ಸರ್ಕಾರ ಉದ್ಯೋಗ ನೀಡುವ ಸಂಸ್ಥೆಗಳನ್ನ ಕರೆತಂದು, ವಿದ್ಯಾವಂತ ಪದವೀಧರರಿಗೆ ಅವರ ಶಿಕ್ಷಣ, ಕೌಶಲದ ಆಧಾರದ ಮೇಲೆ ಕೆಲಸ ಕೊಡಿಸುವ ನಿರ್ಧಾರ ಮಾಡಿದೆ.

ಸರ್ಕಾರ ಈ ಉದ್ಯೋಗ ಮೇಳವನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಬೇಕಿದೆ. ನಿರ್ದಿಷ್ಟವಾಗಿ ಎಷ್ಟು ಜನರಿಗೆ ಉದ್ಯೋಗ ದೊರಕಿದೆ ಎನ್ನುವ ಕುರಿತು ದತ್ತಾಂಶಗಳನ್ನ ಸಂಗ್ರಹಿಟ್ಟುಕೊಳ್ಳಲಿ. ಆರು ತಿಂಗಳಿಗೊಮ್ಮೆ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಿ, ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವ ಕಾರ್ಯಕ್ಕೆ ಮುಂದಾಗಲಿ.

ಈ ಹಿಂದೆಯೂ ಕೂಡ ಜಿಲ್ಲಾ ಮಟ್ಟದಲ್ಲಿ ಅನೇಕ ಉದ್ಯೋಗ ಮೇಳಗಳು ನಡೆದಿದೆ. ಆದರೆ ಅವೆಲ್ಲಾ ಕಾಟಾಚಾರಕ್ಕೆ ನಡೆಯುವಂತಹ ಮೇಳಗಳು ಎನ್ನುವುದು ಈಗಾಗಲೇ ರುಜುವಾತಾಗಿದೆ.

ಆದರೆ ಸರ್ಕಾರ ಈಗ ಆಯೋಜಿಸಲು ನಿರ್ಧರಿಸಿರುವ ಈ ಮೇಳ ಕಾಟಾಚಾರದ ಸಾಲಿಗೆ ಸೇರದಿರಲಿ. ಉದ್ಯೋಗ ಮೇಳವನ್ನ ಸಂಘಟಿಸುವ ಜೊತೆಗೆ, ಉದ್ಯೋಗದಾತರು ಯಾವ ರೀತಿಯ ಕೌಶಲ ಹೊಂದಿರುವ ವಿದ್ಯಾವಂತರನ್ನ ಬಯಸುತ್ತಾರೆ. ಅದೇ ರೀತಿ ಕೌಶಲ ಇದ್ದರೂ ನಮ್ಮ ಯುವಕರು ಯಾಕೆ ಉದ್ಯೋಗ ಪಡೆಯುತ್ತಿಲ್ಲ ಎನ್ನುವ ಕುರಿತು ಸಮೀಕ್ಷೆಗಳು ನಡೆಯಬೇಕು. ಮುಂದಿನ ದಿನಗಳಲ್ಲಿ ಅವುಗಳ ಪರಿಹಾರೋಪಾಯಕ್ಕೆ ಕ್ರಮಗಳನ್ನು ಕೈಗೊಂಡರೆ, ಇನ್ನಷ್ಟು ಯುವಕರಿಗೆ ಉದ್ಯೋಗ ದೊರೆಯಲು ಸಾಧ್ಯ.

### ಶ್ರೀ ಯಚ್ಚರೇಶ್ವರ ಜಾತ್ರೆಯ ನಿಮಿತ್ತ ನಾಟಕ ಪ್ರದರ್ಶನ

# ರಂಗಭೂಮಿ ಪೋಷಕ 'ಕಲಾರಸಿಕ ಮಿತ್ರ ಮಂಡಳಿ'




ಕನ್ನಡ ಭಾಷೆ ಪ್ರಾಚೀನ ಕಾಲದಿಂದಲೂ ಸಾಹಿತ್ಯಕ್ಕೆ ಅಗಾಧವಾದ ಕೊಡುಗೆ ನೀಡುತ್ತಾ ಬಂದಿದೆ. ಕನ್ನಡ ಸಾಹಿತ್ಯದ ಕಾವ್ಯಗಳಲ್ಲಿ ನಾಟಕ ರಮ್ಯವಾಗಿದೆ. ನಾಟಕವು ಪ್ರಧಾನವಾಗಿ ದೃಶ್ಯಮಾಧ್ಯಮ. ಜೀವಂತಿಕೆಯೇ ನಾಟಕದ ಪ್ರಮುಖ ಲಕ್ಷಣವಾಗಿದೆ. ನಾಟಕದಲ್ಲಿ ನಟರು ತಮ್ಮ ಆಂಗಿಕ, ವಾಚಿಕ ಮತ್ತು ಸಾತ್ವಿಕ ಅಭಿನಯದಿಂದ ಕಲಾಭಿಮಾನಿಗಳ ಮನಗೆಲ್ಲುವ ಮೂಲಕ ಮನೋರಂಜನೆ ನೀಡುತ್ತಾರೆ. ಅಷ್ಟೇ ಅಲ್ಲದೆ ತಮ್ಮ ಸಂಭಾಷಣೆಯ ಮೂಲಕ ಪ್ರೇಕ್ಷರ ರಸಭಾವವನ್ನು ಉದ್ದೀಪನಗೊಳಿಸುತ್ತಾರೆ. ನಾಟಕ ಜನರ ಮನದಲ್ಲಿ ಆಳವಾಗಿ ಪರಿಣಾಮ ಬೀರುತ್ತವೆ. ಅಂತಃಕರಣವನ್ನು ಕಲಕಿ ಮನಪರಿವರ್ತನೆಗೆ ಅನುವು ಮಾಡಿಕೊಡುತ್ತವೆ. ನಾಟಕ ಕಾಲಮಾನ ತಕ್ಕಂತೆ ಸಾಮಾಜಿಕ, ರಾಜಕೀಯ ವ್ಯವಸ್ಥೆಗೆ ಕೈಗನ್ನಡಿಯಾಗಿವೆ.

ನಾಟಕದಲ್ಲಿ ಹಲವು ಪ್ರಕಾರಗಳನ್ನು ಕಾಣಬಹುದು. ನಾಟಕಗಳಿಗೆ ಐತಿಹಾಸಿಕ, ಪೌರಣಿಕ, ಸಾಮಾಜೀಕ ಹಿನ್ನೆಲೆಯ ಕಥಾವಸ್ತುಗಳೇ ಪ್ರೇರಣೆಯಾಗಿರುತ್ತವೆ. ಕನ್ನಡ ಸಾಹಿತ್ಯದಲ್ಲಿಯೂ ವಿವಿಧ ಪ್ರಕಾರಗಳನ್ನು ಕಾಣಬಹುದು. ಅದರಲ್ಲೂ ನಾಟಕ ಪ್ರಕಾರ ಶ್ರೀಮಂತವಾಗಿದೆ. ನಾಟಕದ ಹುಟ್ಟು ಬೆಳೆವಣಿಗೆಯನ್ನು ಗುರುತಿಸಲು ಹೋದರೆ ಕ್ರಿ.ಶ.1680ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನದ ಕವಿ ಸಿಂಗರಾರ್ಯನಿಂದ ರಚಿತವಾದ 'ಮಿತ್ರವಿಂದಾ ಗೋವಿಂದ' ಕನ್ನಡದ ಮೊಟ್ಟಮೊದಲ ನಾಟಕವೆಂದು ಕಂಡುಬರುತ್ತದೆ. ಆದರೆ ಇದು ಶ್ರೀಹರ್ಷನಿಂದ ಸಂಸ್ಕೃತದಲ್ಲಿ ರಚಿತವಾಗಿದ್ದು ಎನ್ನಬಹುದು.

ಹೀಗೆ ಕನ್ನಡ ಸಾಹಿತ್ಯಕ್ಕೆ ನಾಟಕ ಸಾಹಿತ್ಯ ಬಹಳ ಮಹತ್ವದ ಕೊಡುಗೆ ನೀಡಿದೆ. ಸಮಾಜದಲ್ಲಿ ನಡೆಯುವ ಏಳು-ಬೀಳುಗಳನ್ನು, ನೈಜ ಘಟನೆಗಳನ್ನು, ಕಾಲ್ಪನಿಕ ಕಥೆಗಳನ್ನು ನಾಟಕ ರೂಪದಲ್ಲಿ ಜನರ ಮುಂದೆ ಪ್ರದರ್ಶಿಸಿ ಜನರ ಮನ ಪರಿವರ್ತನೆ ಮಾಡುವ ಇದೊಂದು ದೊಡ್ಡ ಬ್ರಹ್ಮಾಸ್ತ್ರ ಎಂದರೂ ತಪ್ಪಾಗಲಾರದು.

ಹೀಗೆ ಸುಮಾರು 50 ವರ್ಷಗಳಿಂದ ಗದಗ ಜಿಲ್ಲಾ ರೋಣ ತಾಲೂಕಿನ ಸಿದ್ದಿ ಪುರುಷ ಶ್ರೀ ಯಚ್ಚರೇಶ್ವರ ನೆಲೆಬೀಡಾದ ಹೊಳೆಆಲೂರಿನಲ್ಲಿ ದಿ ಡಿ.ಕೆ. ಶೆಲ್ಲಿಕೇರಿ ಹಾಗೂ ದಿ ಬಿ.ಬಿ. ಅನ್ಸಾರಿಯವರ ಒಡನಾಡಿಗಳು ಕೂಡಿಕೊಂಡು 'ಕಲಾರಸಿಕ ಮಿತ್ರ ಮಂಡಳಿ' ಎಂಬ ಸಂಘ ಹುಟ್ಟು ಹಾಕಿ, ಜಾತ್ರಾ ನಿಮಿತ್ತ ನಾಟಕ ಪ್ರದರ್ಶನ ನೀಡುತ್ತ ಬಂದಿದ್ದಾರೆ. ಇವರ ನಂತರ ಡಾ.ರಾಜಕುಮಾರ ಅಪ್ಪಟ ಅಭಿಮಾನಿಯಾದ ನಾಗರಾಜ ಲಿಂಗಸೂರು ಇವರು 23ವರ್ಷಗಳಿಂದ ತಮ್ಮದೇ ಆದ ಕಲಾ ಬಳಗವನ್ನು ಕಟ್ಟಿಕೊಂಡು ಪ್ರತಿ ವರ್ಷ ಜಾತ್ರಾ ನಿಮಿತ್ತ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ.

ಈ ವರ್ಷ 31-12-2023ರಿಂದ 02-01-2024ರವರೆಗೆ ಮೂರು ದಿನಗಳ ಕಾಲ ಕವಿ ಯಲ್ಲೇಶ ಯಾಳಗಿ ವಿರಚಿತ 'ನಿನ್ನ ಗಂಡ ಯಾರು?' ಅರ್ಥಾತ್ ಮಾತು ಬಿದ್ದಿತು ಮೌನ ಗೆದ್ದಿತು ಎಂಬ ಸಾಮಾಜಿಕ ನಾಟಕ ಪ್ರಹ್ಲಾದ ಮುಂಡಾಸದ ಹಾಗೂ ಎಸ್.ಕೆ. ಆಡಿನ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ. ಈ ನಾಟಕದಲ್ಲಿ ಪ್ರಮುಖವಾಗಿ ನಾಗರಾಜ ಲಿಂಗಸೂರ ಕಥಾ ನಾಯಕ ಮಂಜು ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದೇ ರೀತಿ ನಾಯಕನ ಸ್ನೇಹಿತನ ಸೈನಿಕ ಪಾತ್ರದಲ್ಲಿ ಕುಮಾರಸ್ವಾಮಿ ವಸ್ತ್ರದ, ಎರಡನೆ ನಾಯಕ ರವಿ ಪಾತ್ರದಲ್ಲಿ ಸುನೀಲ ಎಲಿಗಾರ, ಪೋಷಕ ಸೋಗುರಪ್ಪನ ಪಾತ್ರದಲ್ಲಿ ರುದ್ರಾಚಾರ್ಯ ಹರಪ್ಪನಹಳ್ಳಿ, ತಂದೆಯ ಪಾತ್ರದಲ್ಲಿ ಎಚ್.ವ್ಹಿ. ಬ್ಯಾಡಗಿ, ಪ್ರಮುಖ ಹಾಸ್ಯ ಪಾತ್ರದಲ್ಲಿ ಮಂಜುನಾಥ ಬಸರಕೋಡ, ಖಳನಾಯಕನ ಪಾತ್ರದಲ್ಲಿ ಹನಮಂತಪ್ಪ ನವಲಳ್ಳಿ ಕಾಣಿಸಿಕೊಳ್ಳಲಿದ್ದಾರೆ. ಸ್ತ್ರೀ ಪಾತ್ರದಲ್ಲಿ ಶಶಿರೇಖಾ ಎಚ್., ಭಾಗ್ಯ ಎಚ್., ಗೀತಾ ಎಚ್ ಕಾಣಿಸಿಕೊಳ್ಳಲಿದ್ದಾರೆ. ಈ ನಾಟಕದಲ್ಲಿ ಒಂದು ಸುಳ್ಳು ಸಂದೇಶ ಮನುಷ್ಯನ ಜೀವನದಲ್ಲಿ ಏನೆಲ್ಲಾ ಬದಲಾವಣೆ ಮಾಡುತ್ತದೆ ಎಂಬ ಎಂಬುದನ್ನು ಮನಗಾಣಬಹುದು. ಕೆಟ್ಟವರಿಗೆ ತಕ್ಕ ಶಿಕ್ಷೆ ಆಗೇ ಆಗುತ್ತದೆ ಎಂಬ ಸಂದೇಶ ಖಳನಾಯಕನ ಪಾತ್ರದಲ್ಲಿ ಕಾಣಬಹುದು.

ಇಂತಹ ಕೌಟುಂಬಿಕ, ಸುಂದರ ಸಾಮಾಜಿಕ ನಾಟಕ ಪ್ರೇಕ್ಷಕರ ಮುಂದೆ ಜಾತ್ರೆಯ ನಿಮಿತ್ತ ಪ್ರದರ್ಶನವಾಗಲಿದೆ. ಈ ನಾಟಕದ ಪೋಷಕರಾಗಿ ಕಲ್ಮೇಶ್ವರ ಸಾಸಳ್ಳಿ, ವ್ಹಿ.ಎಂ. ವಸ್ತ್ರದ, ಮಹಾಬಲೇಶ್ವರ ಗಾಣಿಗೇರ, ಫಕ್ರುಸಾಬ ಚಿಕ್ಕಮಣ್ಣೂರ ಹಾಗೂ ನಾಟಕ-ಸಂಗೀತ ನಿರ್ದೇಶಕರಾಗಿ ಸುರೇಶ ಚೌಡ್ಕಿ ಇರಲಿದ್ದಾರೆ.

ಇಂತಹ ಸುಂದರ ನಾಟಕ ಹೊಳೆಆಲೂರಿನ ಕಲ್ಮೇಶ್ವರ ಸಾಸಳ್ಳಿಯವರ ಬಯಲು ಜಾಗೆಯಲ್ಲಿ ಪ್ರದರ್ಶನವಾಗಲಿದೆ. ಊರಿನ ಸುತ್ತ ಮುತ್ತಲಿನ ಕಲಾಭಿಮಾನಿಗಳು ಆಗಮಿಸಿ ನಾಟಕದ ರುಚಿ ಸವಿಯಬೇಕು.

**– ಎಸ್.ಕೆ. ಆಡಿನ.**
ಹೊಳೆಆಲೂರ.

# ಅಯ್ಯಪ್ಪಸ್ವಾಮಿ ಮಹಾ ಪೂಜೆ ಇಂದು

**■ ವಿಜಯಸಾಕ್ಷಿ ಸುದ್ದಿ, ಗದಗ**



ಜ್ಯೋತಿ ಸ್ವರೂಪ ಅಯ್ಯಪ್ಪಸ್ವಾಮಿ ಟ್ರಸ್ಟ್ ಕಮಿಟಿ ಕಣಗಿನಹಾಳ ಗ್ರಾಮದಲ್ಲಿ ಡಿ.31ರಂದು ಅಯ್ಯಪ್ಪಸ್ವಾಮಿ ಮಹಾಪೂಜೆ ಹಾಗೂ ಸಿದ್ಧಲಿಂಗಪ್ಪ ಉಮುಚಗಿ ಗುರುಸ್ವಾಮಿಗಳ 18ನೇ ವರ್ಷದ ಶಬರಿಮಲೈ ಯಾತ್ರಾ ಅಂಗವಾಗಿ ಕಣಗಿನಹಾಳ ಗ್ರಾಮದಲ್ಲಿ ಪ.ಪೂಶ್ರೀ ಧರ್ಮರಾಜ ಧರ್ಮರಮಠ ಸುಕ್ಷೇತ್ರ ಕಣಗಿನಹಾಳ ಮತ್ತು ಪ.ಪೂ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿಗಳು ಹರ್ಲಾಪೂರ ಇವರ ದಿವ್ಯ ಸಾನ್ನಿಧ್ಯದಲ್ಲಿ ಬೆಳಿಗ್ಗೆ 8 ಗಂಟೆಗೆ ಕುಂಭ ಮೆರವಣಿಗೆ, ಅಯ್ಯಪ್ಪಸ್ವಾಮಿ ಮಹಾಪೂಜೆ, ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅಯ್ಯಪ್ಪ ಭಕ್ತರು ಸಕಾಲಕ್ಕೆ ಆಗಮಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ತರಕಾರಿ ಬೀಜಗಳ ವಿತರಣೆಗೆ ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, ಉತ್ತಮ ಗುಣಮಟ್ಟದ ತರಕಾರಿ ಬೀಜಗಳನ್ನು ವಿತರಿಸಲು ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ,

ತರಕಾರಿಗಳು ಪೌಷ್ಠಿಕಾಂಶಗಳ ಆಗರ, ಕಡಿಮೆ ಅವಧಿಯಲ್ಲಿ, ಕಡಿಮೆ ವೆಚ್ಚದಲ್ಲಿ ಕಡಿಮೆ ಕ್ಷೇತ್ರದಲ್ಲಿ ಅಧಿಕ ಇಳುವರಿ, ಅಧಿಕ ಲಾಭ, ಪಡೆದುಕೊಳ್ಳಲು ವಿವಿಧ ತಳಿಯ ಸುಧಾರಿತ ತರಕಾರಿ ಬೀಜಗಳನ್ನು ತೋಟಗಾರಿಕೆ ಇಲಾಖೆಯಿಂದ ವಿತರಿಸಲು ನಿರ್ಧರಿಸಲಾಗಿದೆ.

ಈ ವರ್ಷ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು, ರೈತರು ಕಡಿಮೆ ಅವಧಿಯಲ್ಲಿ, ಕಡಿಮೆ ನೀರಿನಲ್ಲಿ, ಅಧಿಕ ಇಳುವರಿ ಕೊಡುವ ತರಕಾರಿ ತಳಿಗಳನ್ನು ವಿತರಿಸಲಾಗುವುದು.

ಸುಮಾರು 2000 ರೂಪಾಯಿ ಬೆಲೆ ಬಾಳುವ ಮೆಣಸಿನಕಾಯಿ, ಟೊಮೆಟೊ, ಬದನೆ, ಚವಳೆ, ಬೆಂಡಿ, ಹೀರೆಕಾಯಿ, ಸವತೆಕಾಯಿ ಉತ್ತಮ ಗುಣಮಟ್ಟದ ತರಕಾರಿ ಬೀಜಗಳನ್ನು ಉಚಿತವಾಗಿ ವಿತರಿಸಲಾಗುವುದು.

ಈ ತರಕಾರಿ ತೋಟಗಳಿಗೆ ಹನಿ ನೀರಾವರಿ ಸೌಲಭ್ಯವನ್ನು ಅಳವಡಿಸಿಕೊಂಡ ರೈತರಿಗೆ ಸಹಾಯಧನವನ್ನು ನೀಡಲಾಗುವುದು. ಅರ್ಹ ರೈತರು 2ಪೋಟೋ, ಎಫ್.ಐ.ಡಿ ಸಂಖ್ಯೆ, ಉತಾರ, ಖಾತೆ ಉತಾರ, ನೀರಾವರಿ ಸರ್ಟಿಫಿಕೇಟ್, ಬ್ಯಾಂಕ್ ಪುಸ್ತಕ, ಆಧಾರ್ ಕಾರ್ಡ್‌ನೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ರೈತರು, ದೊಡ್ಡ ರೈತರು, ಮಹಿಳೆಯರು, ವಿಕಲಚೇತನರು ಹಾಗೂ ಅವರ ಅವಲಂಬಿತ ಕುಟುಂಬದವರು ಇದರ ಲಾಭ ಪಡೆದುಕೊಳ್ಳಲು ಜನವರಿ 10 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶಿರಹಟ್ಟಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸಕ್ತ ರೈತರಿಂದ ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

ತೆಂಗು ಮತ್ತು ಗೋಡಂಬಿ ಪ್ರದೇಶ ವಿಸ್ತರಣೆಯಡಿ, ತೆಂಗಿನ ಮತ್ತು ಗೋಡಂಬಿ ಸಸಿಗಳನ್ನು ಪಡೆಯಲು ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

2023-24ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೆಂಗು ಪ್ರದೇಶ ವಿಸ್ತರಣೆಯಲ್ಲಿ ತೆಂಗು ತೋಟ ಮತ್ತು ಗೋಡಂಬಿ ತೋಟ ನಿರ್ಮಾಣ ಮಾಡಲು ಇಚ್ಛಿಸುವ ರೈತರಿಗೆ, ಉತ್ತಮ ಗುಣಮಟ್ಟದ ಸಸಿಗಳನ್ನು ವಿತರಿಸಲಾಗುವುದು.

ಕಲ್ಪವೃಕ್ಷ ಎಂದು ಕರೆಯಲ್ಪಡುವ ತೆಂಗು ಒಂದು ಪ್ರಮುಖವಾದ ವಾಣಿಜ್ಯ ಬೆಳೆಯಾಗಿದೆ. ಬಹು ಉಪಯೋಗಿ ಬೆಳೆಯಾದ ತೆಂಗು ಕೃಷಿಯಿಂದ ಉತ್ತಮ ಲಾಭಗಳಿಸಬಹುದು. ಆಹಾರ ಪಾನೀಯ, ಉರುವಲು, ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳು ಇತ್ಯಾದಿ, ಹಲವಾರು ತೆಂಗು ಉತ್ಪನ್ನಗಳನ್ನು ಉಪಯೋಗಿಸಲಾಗುವುದು. ತೆಂಗಿನ ಮರದ ಎಲ್ಲಾ ಭಾಗಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬಳಸಲಾಗುವುದರಿಂದ ಇದರ ಮೌಲ್ಯ ದಿನೇ ದಿನೇ ಹೆಚ್ಚಾಗುತ್ತಿದೆ.

ಗೋಡಂಬಿ ಒಂದು ಉತ್ತಮ ಭವಿಷ್ಯದ ಬೆಳೆಯಾಗಿದ್ದು, ರೈತರಿಗೆ ಒಂದು ಉತ್ತಮ ಆದಾಯ ನೀಡುವ ಬೆಳೆಯಾಗಿದ್ದು, ಇದರ ಲಾಭ ಪಡೆಯಬಹುದು.

ತೆಂಗು ಸಸಿಗಳಿಗೆ ಅರ್ಜಿ ಸಲ್ಲಿಸುವವರು ಸಾಲಿನಿಂದ ಸಾಲಿಗೆ 9 ಮೀ (30 ಅಡಿ), ಗಿಡದಿಂದ ಗಿಡಕ್ಕೆ 9 ಮೀ (30 ಅಡಿ) ಅಂತರದಲ್ಲಿ 3 ಅಡಿ ಉದ್ದ, 3 ಅಡಿ ಅಗಲ ಮತ್ತು 3 ಅಡಿ ಆಳದಲ್ಲಿ ಗುಂಡಿ ತೊಡಿಕೊಂಡು ನಂತರ ಮೇಲ್ಮಣ್ಣು, ಕೊಟ್ಟಿಗೆ ಗೊಬ್ಬರ, ಉಸುಕು, ಬೇವಿನ ಹಿಂಡಿ ಗೊಬ್ಬರ ಮಿಶ್ರಣ ತುಂಬಿ ತೆಂಗು ಸಸಿಯನ್ನು ನಾಟಿ ಮಾಡಬೇಕು. ಗೋಡಂಬಿ ಬೆಳೆಯನ್ನು ಇಚ್ಛಿಸುವ ರೈತರು ಭೂಮಿಯನ್ನು ಆಳವಾಗಿ ಉಳಮೆ ಮಾಡಿ, ಶಿಫಾರಸ್ಸು ಮಾಡಿದ 7 ಮೀ ಘಿ 7 ಮೀ ಅಂತರದಲ್ಲಿ , ತಗ್ಗು ತೆಗೆದು, ಗೊಬ್ಬರ ಮಿಶ್ರಣ ತುಂಬಿ ಗೋಡಂಬಿ ಸಸಿಗಳನ್ನು ನಾಟಿ ಮಾಡಬೇಕು. ನಾಟಿ ಮಾಡಿದ ನಂತರ ಊರುಗೋಲು ಕೊಟ್ಟು ಪ್ರತಿ ನಿತ್ಯ ನೀರು ಕೊಡಬೇಕು. ಸದರಿ ಯೋಜನೆಯಡಿ ಅರ್ಜಿ ಸಲ್ಲಿಸುವ ರೈತರು ಅಗತ್ಯ ದಾಖಲೆಗಳಾದ ಫೋಟೋ ಉತಾರ, ನೀರಿನ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಜನವರಿ 6 ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಈ ತರಕಾರಿ ತೋಟಗಳಿಗೆ ಹನಿ ನೀರಾವರಿ ಸೌಲಭ್ಯವನ್ನು ಅಳವಡಿಸಿಕೊಂಡ ರೈತರಿಗೆ ಸಹಾಯಧನವನ್ನು ನೀಡಲಾಗುವುದು. ಅರ್ಹ ರೈತರು 2ಪೋಟೋ, ಎಫ್.ಐ.ಡಿ ಸಂಖ್ಯೆ, ಉತಾರ, ಖಾತೆ ಉತಾರ, ನೀರಾವರಿ ಸರ್ಟಿಫಿಕೇಟ್, ಬ್ಯಾಂಕ್ ಪುಸ್ತಕ, ಆಧಾರ್ ಕಾರ್ಡ್‌ನೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ರೈತರು, ದೊಡ್ಡ ರೈತರು, ಮಹಿಳೆಯರು, ವಿಕಲಚೇತನರು ಹಾಗೂ ಅವರ ಅವಲಂಬಿತ ಕುಟುಂಬದವರು ಇದರ ಲಾಭ ಪಡೆದುಕೊಳ್ಳಲು ಜನವರಿ 10 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಹರು ಇದರ ಸದುಪಯೋಗ ಪಡೆದು ಕೊಳ್ಳಬೇಕೆಂದು ಶಿರಹಟ್ಟಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ವಿಶ್ವಮಾನವ ದಿನಾಚರಣೆ'ಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ

# ಮಾನವಿತೆಯೇ ನಿಜವಾದ ಧರ್ಮ

**■ ವಿಜಯಸಾಕ್ಷಿ ಸುದ್ದಿ, ಧಾರವಾಡ**



ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ತಮ್ಮ ಕಾಣಿಕೆಯಾಗಿ ಕೊಟ್ಟ ಕುವೆಂಪು, ತಮ್ಮ ಮೇರು ಕೃತಿಗಳಿಂದ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹೇಳಿದರು.

ಶುಕ್ರವಾರ ಬೆಳಿಗ್ಗೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ಅಂಗವಾಗಿ 'ವಿಶ್ವಮಾನವ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕುವೆಂಪು ಅವರು ಶ್ರೀ ರಾಮಾಯಣ ದರ್ಶನಂ ಕೃತಿಯ ಮೂಲಕ ಕನ್ನಡ ಭಾಷೆಗೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ನೀಡಿದ ಮಹಾನ್ ರಸಋಷಿ. ಕುವೆಂಪು ಅವರು ವಿಶ್ವಕ್ಕೆ ಕೊಡುಗೆಯಾಗಿ ಕೊಟ್ಟ ವಿಶ್ವಮಾನವ ಸಂದೇಶವನ್ನು ಅಕ್ಷರಶಃ ಪಾಲಿಸುವ ಪ್ರಯತ್ನ ಹಾಗೂ ಅವರ ಉದಾತ್ತ ಚಿಂತನೆಗಳನ್ನು, ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಜೀವನದ ದಾರಿದೀಪಗಳನ್ನಾಗಿ ಮಾಡಿಕೊಳ್ಳಬೇಕು. ಕುವೆಂಪು ಸಾಹಿತ್ಯವನ್ನು ಅನುಸರಿಸಿ ಪ್ರತಿ ಮನೆ ಮನಗಳಿಗೆ ಸಾಹಿತ್ಯದ ವಿಚಾರಧಾರೆಗಳು ತಲುಪಿಸಬೇಕು ಎಂದರು.

ಹಿರಿಯ ಸಾಹಿತಿ ಪ್ರೊ. ಶಾಂತಿನಾಥ ದಿಬ್ಬದ ಉಪನ್ಯಾಸ ನೀಡಿ, ರಾಷ್ಟ್ರಕವಿ ಕುವೆಂಪು, ಮಾನವರೆಲ್ಲರೂ ಒಂದೇ ಎಂದು ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ತಮ್ಮ ಕಥೆ, ಕಾದಂಬರಿ, ವೈಚಾರಿಕತೆಯ ಕಾವ್ಯಗಳ ಮೂಲಕ ಹೋರಾಡಿದರು. ಕುವೆಂಪು ಸಾಹಿತ್ಯವನ್ನು ಎಲ್ಲ ವಿದ್ಯಾರ್ಥಿಗಳು ಓದಬೇಕು. ಅದರಿಂದ ಉತ್ತಮ ವ್ಯಕ್ತಿತ್ವ ನಿರ್ಮಿಸಿಕೊಳ್ಳಬಹುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಮೇಘಾ ಪಾಟೀಲ ನಿರೂಪಿಸಿ, ವಂದಿಸಿದರು.

### ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಸಭೆ

# ಸರ್ವರ ಏಳ್ಗೆ ಬಯಸಿ ಮುನ್ನಡೆಯೋಣ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**



ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಉಳಿವಿಗಾಗಿ ರಾಜ್ಯದ ಎಲ್ಲಾ ಸಂಪಾದಕರು ಒಗ್ಗೂಡುವ ಅಗತ್ಯವಿದ್ದು, ಸಂಘಟಿತರಾಗುವ ಮೂಲಕ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಬೇಕಿದೆ ಎಂದು ದಾವಣಗೆರೆ ಪಬ್ಲಿಕ್ ವಾಯ್ಸ್ ಪ್ರಧಾನ ಸಂಪಾದಕ ಹಾಗೂ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಹೇಳಿದರು.

ಅವರು ಇತ್ತೀಚೆಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನ ಅಕ್ಕಮಹಾದೇವಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಂಘದ ಪದಾಧಿಕಾರಿಗಳ ಆಯ್ಕೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ದಿನಪತ್ರಿಕೆಯನ್ನು ನಡೆಸುವುದು ಇಂದಿನ ದಿನಗಳಲ್ಲಿ ತುಂಬಾ ಕಷ್ಟಕರವಾಗಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಸರ್ಕಾರದಿಂದ ನಮ್ಮ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ ಒಗ್ಗೂಡಬೇಕಾಗಿದೆ. ಪರಸ್ಪರ ಆರೋಪ ಮಾಡುವುದನ್ನು ನಿಲ್ಲಿಸಿ ಪ್ರತಿಯೊಬ್ಬರ ಏಳ್ಗೆಯನ್ನು ಬಯಸುತ್ತಾ ಮುನ್ನಡೆಯಬೇಕಾಗಿದೆ. ನಮ್ಮ ವೃತ್ತಿಯನ್ನು ಜವಾಬ್ದಾರಿಯುತವಾಗಿ ನಿಭಾಯಿಸುವ ಮೂಲಕ ಹಕ್ಕನ್ನು ಪಡೆಯಲು ಮುಂದಾಗೋಣ ಎಂದರು.

> ಜಾಹೀರಾತು ಬಿಡುಗಡೆ, ಜಾಹೀರಾತಿನ ಹಣ ಬಿಡುಗಡೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಸಂಪಾದಕರು ಅನುಭವಿಸುತ್ತಿದ್ದಾರೆ. ಎಲ್ಲಾ ಸಮಸ್ಯೆಗಳನ್ನು ಇಲಾಖೆಯ ಆಯುಕ್ತರ ಹಾಗೂ ಸರ್ಕಾರದ ಮುಂದೆ ಇಡುವ ಮೂಲಕ ಪರಿಹಾರಕ್ಕೆ ಮನವಿ ಮಾಡೋಣ. ಸಂಪಾದಕರ ಹಿತ ಕಾಪಾಡುವುದೇ ಸಂಘಟನೆಯ ಪ್ರಮುಖ ಉದ್ದೇಶವಾಗಿದೆ.
>
> ಈ ಸಂಘಟನೆಯಲ್ಲಿ ಸಾಮೂಹಿಕ ನಾಯಕತ್ವ ಇರುತ್ತದೆ. ಪ್ರತಿಯೊಬ್ಬ ಸದಸ್ಯರೂ ಕೂಡ ಸಂಘಟನೆಯಲ್ಲಿ ಪ್ರಮುಖರಾಗುತ್ತಾರೆ ಎಂದು ಎ.ಸಿ. ತಿಪ್ಪೇಸ್ವಾಮಿ ಅಭಿಪ್ರಾಯಪಟ್ಟರು.

ಸಭೆಯಲ್ಲಿ ಭಾಗವಹಿಸಿದ ಎಲ್ಲ ಸಂಪಾದಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಮಂಜುನಾಥ ಬಸಪ್ಪ ಅಬ್ಬಿಗೇರಿ, ಭೀಮರಾಯ ಹದ್ದಿನಾಳ, ರಾಮಕೃಷ್ಣ, ಮಹ್ಮದ್ ಯೂನುಸ್ ಸೇರಿದಂತೆ ಇತರ ಪದಾಧಿಕಾರಿಗಳಾದ ಇಂದ್ರಮ್ಮ, ಚನ್ನಬಸವ ಬಾಗಲವಾಡ, ಖಾನ್‌ಸಾಬ ಮೋಮಿನ್, ಹೆಚ್.ನರಸಿಂಹರಾಜು, ರಶ್ಮಿ ಬಸವರಾಜ ಪಾಟೀಲ್, ಶರಣಬಸವ, ಓ.ಮಲ್ಲೇಶ, ವಿ.ಅನೂಪ್‌ಕುಮಾರ, ಟಿ.ಎಸ್. ಕೃಷ್ಣಮೂರ್ತಿ, ಶಿವಶಂಕರ ಎಂ.ಸಿ, ಕೆ.ಎಸ್. ಸ್ವಾಮಿ, ಮಿಯಾ ಸಾಹೇಬ್ ಕೊಡಗಲಿ, ರವಿ. ಆರ್, ಗುರುಬಸವಯ್ಯ.ಯು, ವೇದಮೂರ್ತಿ ಎಸ್.ಟಿ, ಹೆಚ್.ಸುಧಾಕರ, ಅರುಣಾ ಜ್ಯೋತಿ ಬಿ.ಕೆ, ಲಕ್ಕಪ್ಪ ವೈ. ರಾಣಗೋಳ, ಮಲ್ಲಿಕಾರ್ಜುನ ನಾಯಕ, ಬಬಿತಾ ರಾಜೇಂದ್ರ ಪೊವಾರ, ಮಂಜುನಾಥ ವಿ.ಎನ್, ಹಿರೋಜಿ ಎಂ.ಮಾವರಕರ್, ಕವಿತಾ. ಎಸ್ ಮುಂತಾದವರಿದ್ದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕಾರ್ಯಾಗಾರ

**■ ವಿಜಯಸಾಕ್ಷಿ ಸುದ್ದಿ, ರೋಣ**

ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲ ಯದ ವತಿಯಿಂದ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ತಾಲೂಕಿನ ಸರಕಾರಿ, ಅನುದಾನಿತ ಮತ್ತು ಅನುದಾನರಹಿ ಪ್ರೌಢಶಾಲೆಗಳ ಸಮಾಜ ವಿಜ್ಞಾನ ಶಿಕ್ಷಕರ ಕಾರ್ಯಾಗಾರ ಸರಕಾರಿ ಪ್ರೌಢಶಾಲೆ ಚಿಕ್ಕಮಣ್ಣೂರನಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿ ಸಿದ ಕ್ಷೇತ್ರಶಿಕ್ಷಣಾಧಿಕಾರಿ ರುದ್ರಪ್ಪ ಎನ್. ಹುರಳಿ ಮಾತನಾಡಿ, ಎಲ್ಲಾ ಶಾಲೆಗಳ ಫಲಿತಾಂಶ ಹೆಚ್ಚಳಕ್ಕೆ ಮಹತ್ವ ನೀಡಿ, ಗುಣಾತ್ಮಕ ಶಿಕ್ಷಣದ ಮೂಲಕ ಮಕ್ಕಳ ಪ್ರಗತಿಗೆ ಶ್ರಮಿಸಬೇಕೆಂದು ನುಡಿದರಲ್ಲದೆ, ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗೆ ಶಿಕ್ಷಕರು ಮಾಡಬೇಕಾದ ಕಾರ್ಯಗಳ ಕುರಿತು ತಿಳಿಸಿದರು.

ಮುಖ್ಯೋಪಾಧ್ಯಾಯೆ ಎಲ್.ಸಿ. ಮುಂಡೆವಾಡಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಜಗದೀಶ ಪೂಜಾರ, ಸಂಪನ್ಮೂಲ ವ್ಯಕ್ತಿ ಸಿ.ಬಿ. ಮುಧೋಳಮಠ, ಲೋಕೇಶ, ಎಸ್.ಡಿ. ಕೋಲಕಾರ, ವಿ.ಎ. ಮಠ, ಶ್ರೀಮತಿ ತೋಟಗಂಟಿ ಇದ್ದರು. ಆರಂಭದಲ್ಲಿ ಎಂ.ಎಂ. ಅರಳಿಗಿಡದ ಸ್ವಾಗತಿಸಿದರು, ಎಚ್.ಆರ್. ಭಜಂತ್ರಿ ಕಾರ್ಯಕ್ರಮ ನಿರೂಪಿಸಿದರು. ಎಂ.ಜಿ. ಹಿರೇಗೌಡ್ರ ವಂದಿಸಿದರು.

# ವಿವಿಧ ಯೋಜನೆಗಳಿಗೆ ಸಚಿವ ಡಾ. ಎಚ್.ಕೆ. ಪಾಟೀಲ ಚಾಲನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ವತಿಯಿಂದ ನಗರದ ಮುನ್ಸಿಪಲ್ ಕಾಲೇಜು ಆವರಣದಲ್ಲಿ ಶನಿವಾರದಂದು 44 ಲಕ್ಷ ರೂ.ಗಳ ಅನುದಾನದಲ್ಲಿ 800 ಲೀ ಸಾಮರ್ಥ್ಯದ

ಸಕ್ಷನ್ ಕಮ್ ಜೆಟ್ಟಿಂಗ್ ಯಂತ್ರೋಪಕರಣ ವಾಹನ, 3.60 ಲಕ್ಷ ರೂ. ಗಳ ಅನುದಾನದಲ್ಲಿ ಸಾರ್ಟಿಂಗ್ ಟೇಬಲ್ ಕನ್ವೆಯರ್ ಬೆಲ್ಟಗಳಿಗೆ ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಡಾ.ಎಚ್.ಕೆ.ಪಾಟೀಲ ಚಾಲನೆ ನೀಡಿದರು.

100 ಲಕ್ಷ ರೂ.ಗಳ ಅನುದಾನದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಘಟಕದಲ್ಲಿ ವಾಹನ ನಿಲುಗಡೆ ಜಾಗೆಯಲ್ಲಿ ಕಾಂಪೌಂಡ್ ಗೋಡೆ ಹಾಗೂ ನೆಲ ಹಾಸು ಕಾಮಗಾರಿಗೆ, 11.30 ಲಕ್ಷ ರೂ ಗಳ ಅನುದಾನದಲ್ಲಿ ಮುನ್ಸಿಪಲ್ ಹೈಸ್ಕೂಲಿನ ಮೇಲ್ಛಾವಣಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಸಚಿವರು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಸದಸ್ಯರು, ಪೌರಾಯುಕ್ತ ಗಂಗಪ್ಪ ಎಂ., ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರ ಎಚ್.ಎ.ಬಂಡಿವಡ್ಡರ, ನಗರ ಸಭೆ ಪರಿಸರ ಅಧಿಕಾರಿ ಆನಂದ ಬದಿ ಸೇರಿದಂತೆ ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

**'ಸನ್ಮತಿ' ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಡಾ. ಉದಯ ಕುಲಕರ್ಣಿ**

# ವಿದ್ಯಾರ್ಥಿಗಳಲ್ಲಿ ಜ್ಞಾನಕ್ಕಾಗಿ ತೃಷೆ ಇರಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಮನಸ್ಸನ್ನು ನಕಾರಾತ್ಮಕ ಯೋಚನೆಗಳಿಂದ ಮುಕ್ತವಾಗಿಸಿ, ಸಕಾರಾತ್ಮಕ ಭಾವನೆಗಳತ್ತ ಕ್ರೋಢೀಕರಿಸಿಕೊಂಡಾಗ ಮನಸ್ಸು ಉಲ್ಲಸಿತವಾಗಿ ನಿಮ್ಮ ಅಧ್ಯಯನ ಹೃದಯದಾಳಕ್ಕೆ ಇಳಿದು ಜ್ಞಾನಗಂಗೆ ಪ್ರವಹಿಸಲು ಸಾಧ್ಯ ಎಂದು ನಗರದ ಖ್ಯಾತ ಸ್ತ್ರೀರೋಗ ತಜ್ಞರಾದ ಡಾ. ಉದಯ ಕುಲಕರ್ಣಿ ತಿಳಿಸಿದರು.

ನಗರದ ಸನ್ಮಾರ್ಗ ಪದವಿಪೂರ್ವ ಕಾಲೇಜಿನ ದ್ವಿತಿಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ 'ಸನ್ಮತಿ' ಸಮಾರಂಭ ಹಾಗೂ ಪಾರಿತೋಷಕ ವಿತರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಕೇವಲ ಪದವಿಗಾಗಿ ದಾಹ ಬೇಡ, ಜ್ಞಾನಕ್ಕಾಗಿ ತೃಷೆ ಇರಲಿ ಎಂದರು.

ಖ್ಯಾತ ಸ್ತ್ರೀರೋಗ ತಜ್ಞೆ ಡಾ. ರಾಧಿಕಾ ಕುಲಕರ್ಣಿ ಮಾತನಾಡಿ, ಸಮಯ ಪ್ರಜ್ಞೆ, ಕಠಿಣ ಪರಿಶ್ರಮ, ಪ್ರಾಮಾಣಿಕತೆ, ನಿಷ್ಠೆ, ಮನೋನಿಗ್ರಹ ಇವು ವಿದ್ಯಾರ್ಥಿಗಳಿಗೆ ಭವ್ಯ ಭವಿಷ್ಯದ ಬುನಾದಿಯಾಗಿವೆ ಎಂದರು.

> ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿ ಜೀವನದ ಸಾಧನೆಗೆ ಕೊನೆ ಎಂಬುದಿಲ್ಲ. ಅದು ನಿರಂತರವಾಗಿ ಸಾಗಬೇಕಾದರೆ, ಮನೋದೃಢತೆ ಸಾಧಿಸುವ ತೀವ್ರ ಹಂಬಲದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ಸನ್ಮತಿಗಳನ್ನು ಮೇಳವಿಸಿಕೊಂಡಾಗ ಸಾಧನೆ ಸುಲಭ. ಅಂತಹ ಸನ್ಮಾರ್ಗದಲ್ಲಿ ನಮ್ಮ ವಿದ್ಯಾರ್ಥಿಗಳು ತಮ್ಮ ಪಥದತ್ತ ದೃಢ ಹೆಜ್ಜೆ ಹಾಕುತ್ತಾರೆ ಎಂಬ ಪ್ರಬಲ ವಿಶ್ವಾಸ ತಮಗಿದೆಯೆಂದರು.

ಸಂಸ್ಥೆಯ ನಿರ್ದೇಶಕ ಪ್ರೊ. ಉಡುಪಿ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸಾಧಿಸಲು ಇಚ್ಛಾಶಕ್ತಿ, ಸಂಕಲ್ಪ ಶಕ್ತಿ ಹಾಗೂ ಕ್ರಿಯಾ ಶಕ್ತಿಗಳು ಮೇಳವಿಸಿದಾಗ ಸಾಧನೆ ಸುಲಭ ಎಂದು ತಿಳಿಸಿದರು.

ವರ್ಷಾ ಢೋಲಾ ಹಾಗೂ ಸಂಗಡಿಗರು ಪ್ರಾರ್ಥನೆಗೈದರು. ಹಿರಿಯ ಉಪನ್ಯಾಸಕ ಪ್ರೊ. ಮುರಲೀಧರ ಸಂಕನೂರ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಉಪನ್ಯಾಸಕ ಪ್ರೊ. ಹೆಚ್.ಎಸ್. ದಳವಾಯಿ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಜೀವಶಾಸ್ತ್ರ ಉಪನ್ಯಾಸಕ ಪ್ರೊ. ವಿಜಯಕುಮಾರ ಹೆಬಸೂರ ವಂದಿಸಿದರು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ರಾಹುಲ್ ಒಡೆಯರ್, ಪ್ರೊ. ಸಯ್ಯದ್ ಮತೀನ್ ಮುಲ್ಲಾ, ಆಡಳಿತಾಧಿಕಾರಿ ಎಮ್.ಸಿ. ಹಿರೇಮಠ, ಬೋಧಕ-ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪರಾಧಗಳ ನಿಯಂತ್ರಣಕ್ಕೆ ಸಹಕರಿಸಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಪೊಲೀಸರೊಂದಿಗೆ ಸಾರ್ವಜನಿಕರ ಸಹಕಾರವೂ ಮುಖ್ಯವಾಗಿದೆ ಎಂದು ಮುಳಗುಂದ ಪೊಲೀಸ್ ಠಾಣಾ ಸಿಪಿಐ ಸಂಗಮೇಶ ಶಿವಯೋಗಿ ಹೇಳಿದರು.

ಅವರು ಪಟ್ಟಣದ ಆರ್.ಎನ್. ದೇಶಪಾಂಡೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಗದಗ ಜಿಲ್ಲಾ ಪೊಲೀಸ್, ಮುಳಗುಂದ ಪೊಲೀಸ್ ಠಾಣೆ ಸಹಯೋಗದಲ್ಲಿ 'ಅಪರಾಧ ತಡೆ ಮಾಸಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಜನಸಾಂದ್ರತೆಯಿಲ್ಲದ ಪ್ರದೇಶದಲ್ಲಿ ಕಳ್ಳರ ಕಣ್ಣಿಗೆ ರಾಚುವಂತೆ ಆಭರಣಗಳನ್ನು ಧರಸಿಕೊಂಡು ಹೋಗುವುದರಿಂದ ಕಳ್ಳ-ಕಾಕರಿಗೆ ಅವಕಾಶ ನಿಡಿದಂತಾಗುತ್ತದೆ. ಮದ್ಯಪಾನ ಸೇವಿಸಿ ವಾಹನ ಚಲಾವಣೆ ಮಾಡಬಾರದು, ಮಕ್ಕಳ ಮೇಲಿನ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಬಾಲ್ಯ ವಿವಾಹ ಮತ್ತಿತರ ಹಲವಾರು ಪ್ರಕರಣಗಳು ಸಾರ್ವಜನಿಕರ ಕಣ್ಣಿಗೆ ಕಂಡರೂ ಕಾಣದಂತೆ ಇರುವುದರಿಂದ ಅಪರಾಧಗಳು ಹೆಚ್ಚುತ್ತವೆ. ಅವುಗಳನ್ನು ತಡೆಗಟ್ಟಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿದಲ್ಲಿ ಪ್ರಕರಣಗಳನ್ನು ತಡೆಗಟ್ಟಬಹುದು ಎಂದರು

ಅಧ್ಯಕ್ಷತೆಯನ್ನು ಕಾಲೇಜು ಪ್ರಾಚಾರ್ಯ ಆರ್.ಎನ್. ಕಲ್ಲನಗೌಡರ ವಹಿಸಿದ್ದರು. ಪ್ರಸನ್.ಎಸ್, ವಿಠಲ ಪವಾರ, ಪೊಲೀಸ್ ಸಿಬ್ಬಂದಿ, ಪಿಎಸ್ಐ ವಿ.ಎಸ್. ಚವಡಿ, ಎನ್.ದಳವಾಯಿ, ಸುನೀಲ್ ಹುಗಾರಿ ಹಾಗೂ ಕಾಲೇಜು ವಿದ್ಯಾರ್ಥಿಗಳಿದ್ದರು.

**ಸಚಿವರೆದುರೇ ಕೆಆರ್‌ಡಿಎಲ್ ಇಂಜಿನಿಯರ್‌ರನ್ನು ತರಾಟೆಗೆ ತೆಗೆದುಕೊಂಡ ಶಾಸಕ ಡಾ. ಚಂದ್ರು ಲಮಾಣಿ**

# ಕಾಮಗಾರಿಯನ್ನು ಅರ್ಧಕ್ಕೇ ನಿಲ್ಲಿಸಿದ್ದೇಕೆ?

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕು ವ್ಯಾಪ್ತಿಯಲ್ಲಿ ಕೈಗಾ-ಇಳಕಲ್ ರಾಜ್ಯ ಹೆದ್ದಾರಿ ಹದಗೆಟ್ಟಿರುವದನ್ನು ಪರೀಕ್ಷಿಸಲು ಆಗಮಿಸಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಎದುರಿನಲ್ಲಿಯೇ ಕೆಆರ್‌ಡಿಎಲ್ ಇಂಜಿನಿಯರ್ ಅವರನ್ನು ಶಾಸಕ ಡಾ.ಚಂದ್ರು ಲಮಾಣಿ ತರಾಟೆಗೆ ತೆಗೆದುಕೊಂಡ ಘಟನೆ ಶನಿವಾರ ನಡೆದಿದೆ.

ಶಾಸಕ ಡಾ. ಚಂದ್ರು ಲಮಾಣಿ ಅವರು ಹದಗೆಟ್ಟ ಕೈಗಾ-ಇಳಕಲ್ ರಾಜ್ಯ ಹೆದ್ದಾರಿಯ ಬಗ್ಗೆ ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ವಿಷಯ ಮಂಡನೆ ಮಾಡಿದ್ದರು. ಅಂದು ಸಚಿವರು ತಾವೇ ಸ್ವತಃ ರಸ್ತೆ ವೀಕ್ಷಣೆಗೆ ಬರುತ್ತೇನೆ ಎಂದು ಹೇಳಿದ್ದರು. ಅದರಂತೆ ಸಚಿವ ಸತೀಶ ಜಾರಕಿಹೊಳಿ ರಸ್ತೆ ಪರಿಸ್ಥಿತಿಯನ್ನು ಕಣ್ಣಾರೆ ವೀಕ್ಷಿಸಿ ರಸ್ತೆ ಸುಧಾರಣೆಗೆ ಸರಕಾರದಿಂದ ವಿಶೇಷ ಅನುದಾನ ಕಲ್ಪಿಸುವ ಭರವಸೆ ನೀಡಿದರು. ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳಲ್ಲಿ ಹದಗೆಟ್ಟಿರುವ ರಸ್ತೆಗಳ ಕುರಿತು ಶಾಸಕ ಡಾ.ಚಂದ್ರು ಲಮಾಣಿ ತಮ್ಮ ಗಮನಕ್ಕೆ ತಂದಿದ್ದಾರೆ. ಹಂತ ಹಂತವಾಗಿ ರಸ್ತೆ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.



ರಸ್ತೆ ಮೇಲ್ದರ್ಜೆಗೇರಿಸಲು ಕೇಂದ್ರ ಸರಕಾರಕ್ಕೆ ವಿನಂತಿ ಮಾಡಲಾಗುವದು ಎಂದರು.

ಈ ವೇಳೆ ಕೆಆರ್‌ಡಿಎಲ್ ಇಂಜಿನಿಯರ್ ಅವರನ್ನು ಡಾ.ಚಂದ್ರು ಲಮಾಣಿ ತರಾಟೆಗೆ ತೆಗೆದುಕೊಂಡು, ರಸ್ತೆ ದುರಸ್ಥಿ ಮಾಡಲು ಈ ಹಿಂದೆ ಕೆಆರ್‌ಡಿಎಲ್‌ನವರಿಗೆ ಟೆಂಡರ್ ಆಗಿದೆ. ಅರ್ಧಮರ್ಧ ರಸ್ತೆ ದುರಸ್ಥಿ ಕಾರ್ಯ ಮಾಡಿ ಅರ್ಧಕ್ಕೆ ಕೈಬಿಟ್ಟು ಹೋಗಿದ್ದಲ್ಲದೆ ಕೇಳಿದರೆ ಬಿಲ್ ಆಗಿಲ್ಲ ಎಂಬ ಹಾರಿಕೆ ಉತ್ತರ ನೀಡುತ್ತಿದ್ದಾರೆ. ತಾವು ಕ್ಷೇತ್ರದ ಬೇರೆ ರಸ್ತೆ ಅಭಿವೃದ್ಧಿಗೆ ಬಂದಿರುವ ಅನುದಾನವನ್ನು ಜನರ ಒತ್ತಾಯದ ಮೇರೆಗೆ ಕೈಗಾ-ಇಳಕಲ್ ರಾಜ್ಯ ಹೆದ್ದಾರಿಯ ಗುಂಡಿ ಮುಚ್ಚಲು ಬಳಸಿದ್ದೇವೆ ಎಂದು ಸಚಿವರ ಮುಂದೆ ಅಸಮಾಧಾನ ವ್ಯಕ್ತಪಡಿಸಿದರು. ರಸ್ತೆ ಅರ್ಧಕ್ಕೆ ಬಿಟ್ಟು ದುರಸ್ಥಿಗೆ ಬಂದಿರುವ ವಾಹನ-ಸರಂಜಾಮುಗಳನ್ನು ಕಳೆದ ಆರು ತಿಂಗಳ ಹಿಂದೆಯೇ ತೆಗೆದುಕೊಂಡು ಹೋಗಿದ್ದು ಯಾಕೆ ಎಂದು ಇಂಜಿನಿಯರರನ್ನು ಶಾಸಕರು ಪ್ರಶ್ನಿಸಿದರು. ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ರಸ್ತೆ ಹದಗೆಟ್ಟಿದ್ದು ಹೆಚ್ಚು ಅನುದಾನ ಬಿಡುಗಡೆಗೊಳಿಸುವಂತೆ ಸಚಿವರಿಗೆ ಮನವಿ ಮಾಡಿದರು. ಆಗ ಇಂಜಿನಿಯರ್ ಅವರು 15 ದಿನಗಳೊಗಾಗಿ ಉಳಿದ ಕಾಮಗಾರಿ ಪೂರ್ಣಗೊಳಿಸುತ್ತೇನೆ ಎಂದಾಗ ಸಚಿವ ಜಾರಕಿಹೋಳಿ ಅವರು 15 ದಿವಸವಲ್ಲ, 1 ತಿಂಗಳು ತೆಗೆದುಕೊಳ್ಳಿ, ಕಾಮಗಾರಿ ಪೂರ್ಣಗೊಳಿಸಿ ಎಂದು ನಿರ್ದೇಶನ ನೀಡಿದರು. ಗದಗ ಹೋಗುವ ಮಾರ್ಗದುದ್ದಕ್ಕೂ ಶಾಸಕರು ಅಲ್ಲಲ್ಲಿ ಸಚಿವರಿಗೆ ರಸ್ತೆಯ ಪರಿಸ್ಥಿತಿ ವಿವರಿಸಿದರು.

ಈ ವೇಳೆ ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ, ಟಿ.ಈಶ್ವರ, ಸತೀಶ ಪಾಟೀಲ, ಫಕ್ಕೀರೇಶ ಮ್ಯಾಟಣ್ಣವರ, ಅಮರೇಶ ತೆಂಬದಮನಿ, ಸೋಮಣ್ಣ ಬೆಟಗೇರಿ, ದೀಪಕ ಲಮಾಣಿ, ಯಲ್ಲಪ್ಪ ತಳವಾರ, ಅಣ್ಣಪ್ಪ ರಾಮಗೇರಿ, ನೀಲಪ್ಪ ಶರಸೂರಿ, ಪದ್ಮರಾಜ ಪಾಟೀಲ, ಪ್ರಕಾಶ ಕೊಂಚಿಗೇರಿಮಠ, ವಿಜಯ ಕರಡಿ ಸೇರಿದಂತೆ ಅನೇಕರಿದ್ದರು.

> ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಗದಗ ಜಿಲ್ಲೆಯಲ್ಲಿ ಶೇ.30ರಷ್ಟು ಮಾತ್ರ ರಸ್ತೆಗಳು ಹದಗೆಟ್ಟಿವೆ ಎಂದಾಗ, ಪತ್ರಕರ್ತರು ಶೇ.70ರಷ್ಟು ಹದಗೆಟ್ಟಿವೆ ಎಂದು ಸಚಿವರಿಗೆ ವಿವರಿಸಿದರು. ರಸ್ತೆ ಸುಧಾರಣೆ ಕುರಿತು ಆಗಬೇಕಾಗಿರುವ ಕಾರ್ಯಗಳನ್ನು ಆದಷ್ಟು ಶೀಘ್ರ ಪರಿಹರಿಸುತ್ತೇವೆ ಎಂದು ಹೇಳಿದರು. ಲಕ್ಷ್ಮೇಶ್ವರಕ್ಕೆ ಬರುವ ಮೊದಲು ಮಾರ್ಗದ ಯಲವಗಿ ರೇಲ್ವೆ ಮಾರ್ಗದ ಕೆಳ ಸೇತುವೆ ಪರಿಶೀಲಿಸಿದರು. ಈ ವೇಳೆ ಸೇರಿದ್ದ ಜನರು ಈ ಸೇತುವೆ ಅವೈಜ್ಞಾನಿಕವಾಗಿ ನಿರ್ಮಾಣಗೊಂಡಿದೆ. ಮಳೆಗಾಲದಲ್ಲಿ ಸೇತುವೆ ಕೆಳಗೆ ಅಪಾರ ಪ್ರಮಾಣ ನೀರು ನಿಂತು ಸಂಚಾರ ಸ್ಥಗಿತಗೊಳ್ಳತ್ತದೆ ಎಂದು ಸಮಸ್ಯೆ ಹೇಳಿದರು. ಕೂಡಲೇ ರಾಜ್ಯ ಸರಕಾರದಿಂದ ಕೇಂದ್ರಕ್ಕೆ ಪತ್ರ ಬರೆದು ಮೇಲ್ಸೆತುವೆ ನಿರ್ಮಿಸಲು ಮನವಿ ಮಾಡಲಾಗುವದು ಎಂದರು.

# ಸಮರ್ಪಕ ನೀರು ಪೂರೈಕೆಗೆ ಕ್ರಮ ವಹಿಸಿ

▶▶ಮೊದಲನೇ ಪುಟದಿಂದ

ಪ್ರತಿ 15-20 ದಿನಗಳಿಗೊಮ್ಮೆ ಕುಡಿಯುವ ನೀರು ಒದಗಿಸಿದರೆ ಹೇಗೆ? ಸಾರ್ವಜನಿಕರು ಈ ಬಗ್ಗೆ ಹಲವಾರು ಬಾರಿ ದೂರುಗಳನ್ನು ನೀಡಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಅವಳಿ ನಗರಕ್ಕೆ ಸಮರ್ಪಕ ನೀರು ಪೂರೈಕೆ ಆಗದಿರುವ ಕುರಿತು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಯಾಗಿ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ, ಅಧಿಕಾರಿಗಳು ಸಮರ್ಪಕ ನೀರು ಪೂರೈಕೆ ಬಗ್ಗೆ ಗಮನ ಹರಿಸಬೇಕು. ಮಳೆಗಾಲ ಪ್ರಾರಂಭ ಆಗುವವರೆಗೂ ನೀರು ಪೂರೈಕೆಯಲ್ಲಿ ವ್ಯತಯವಾಗದಂತೆ ಅಗತ್ಯದ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜಿಮ್ಸ್ ಹಾಗೂ ತಾಲೂಕು ಆಸ್ಪತ್ರೆಗಳ ಸ್ವಚ್ಛತೆ, ಮೂಲಸೌಕರ್ಯಗಳ ಬಗ್ಗೆ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕು. ಆಸ್ಪತ್ರೆಗಳ ಶೌಚಾಲಯಗಳ ಅವ್ಯವಸ್ಥೆಯನ್ನು ಶೀಘ್ರವೇ ಸರಿಪಡಿಸಬೇಕು. ಆಸ್ಪತ್ರೆಗೆ ಆಗಮಿಸುವ ರೋಗಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು ಸಚಿವರು ಸೂಚಿಸಿದರು.

# ಅಸಮರ್ಪಕ ನೀರು ಪೂರೈಸುವ ಏಜೆನ್ಸಿಗಳ ಮೇಲೆ ಕ್ರಮ ಜರುಗಿಸಿ

▶▶ಮೊದಲನೇ ಪುಟದಿಂದ



ಶಾಸಕ ಸಿ.ಸಿ. ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಪೈಪ್‌ಲೈನ್ ಕಾರ್ಯವು ಡಿ.ಬಿ.ಓ.ಟಿ ಹಾಗೂ ಜಲ ಜೀವನ ಮಿಷನ್ ಯೋಜನೆಯಡಿ ಪೂರ್ಣಗೊಂಡಿದೆ. ಇದಕ್ಕಾಗಿ ಯಾವುದೇ ಹೆಚ್ಚುವರಿ ಕಾಮಗಾರಿಯ ಅಗತ್ಯವಿಲ್ಲ. ಅಗತ್ಯವಿದ್ದಲ್ಲಿ ಮೇಲುಸ್ಥರ ನೀರಿನ ಟ್ಯಾಂಕ್ ನಿರ್ಮಿಸಲು ತಿಳಿಸಿದರು. ಕೋವಿಡ್ ರೂಪಾಂತರಿ ವೈರಸ್ ಪ್ರಭಾವ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅಗತ್ಯದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅಲ್ಲದೇ ತಾಲೂಕು ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ ನೀಡುವಂತೆ ತಿಳಿಸಿದರು.

ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಜಿಗಳೂರು ಕೆರೆ ಬತ್ತುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಕೆರೆಗೆ ನೀರು ಹರಿಸಲು ಕ್ರಮ ವಹಿಸುವಂತೆ ತಿಳಿಸಿದರು. ಅಲ್ಲದೇ ಪಶು ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರುಗಳ ನೇಮಕಕ್ಕೆ ಕ್ರಮ ವಹಿಸುವಂತೆ ಸಭೆಯ ಗಮನಕ್ಕೆ ತಂದರು.

ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಶಿರಹಟ್ಟಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆಯಿದೆ. ಶಕ್ತಿ ಯೋಜನೆಯಿಂದಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದ್ದು, ಇದರಿಂದ ಮೇಲಿಂದ ಮೇಲೆ ಪ್ರತಿಭಟನೆಗಳು ಜರುಗುತ್ತಿವೆ ಎಂದು ಸಭೆಯ ಗಮನಕ್ಕೆ ತಂದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಗದಗ ಮುನ್ಸಿಪಲ್ ಕಾಲೇಜನ್ನು ಸರ್ಕಾರಕ್ಕೆ ಪಡೆಯಲು ಅಗತ್ಯದ ಕ್ರಮಗಳನ್ನು ಕೈಗೊಳ್ಳಲು ನಿರ್ಣಯಿಸಿದನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಸಚಿವರಲ್ಲಿ ಮನವಿ ಮಾಡಿದರು. ಅಲ್ಲದೇ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಜಿಲ್ಲೆಯು ಪ್ರಗತಿ ಸಾಧಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಮಾಹಿತಿ ಪಡೆದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಾ.ಬಸವರಾಜ ಧಾರವಾಡರಿಗೆ ಗೌರವ ಶ್ರೀರಕ್ಷೆ



■ವಿಜಯಸಾಕ್ಷಿ ಸುದ್ದಿ, ಗದಗ

ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಶ್ರೀ ತೋಂಟದಾರ್ಯ ಮಠದಲ್ಲಿ ಇತ್ತೀಚೆಗೆ ಲಿಂಗಾಯತ ಪ್ರಗತಿಶೀಲ ಸಂಘ ಯಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ ಹಾಗೂ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ ಆಶ್ರಯದಲ್ಲಿ ಅವ್ವನ ಕುರಿತು ವಿಶೇಷ ಶಿವಾನುಭವ ಆಯೋಜಿಸುವ ಮೂಲಕ ನಾಡಿನ ತಾಯಂದಿರನ್ನು ನೆನೆಯುವ ಹಾಗೂ ಗೌರವಿಸುವ ಕಾರ್ಯಕ್ರಮದಲ್ಲಿ ಡಾ.ಬಸವರಾಜ ಧಾರವಾಡ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ.ಮ.ನಿ.ಪ್ರ. ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ, ಮುಖ್ಯ ಅತಿಥಿಗಳಾದ ಅವ್ವ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಶರಣ ಸಭಾಪತಿ ಬಸವರಾಜ ಹೊರಟ್ಟಿ, ಕಾರ್ಯದರ್ಶಿ ಶರಣ ಶಶಿ ಸಾಲಿ, ಟ್ರಸ್ಟ್‌ನ ಗದಗ ಜಿಲ್ಲಾ ಸಂಚಾಲಕ ಶರಣ ಡಾ.ಬಸವರಾಜ ಧಾರವಾಡ, ಶಿವಾನಂದ ಪಟ್ಟಣಶೆಟ್ಟಿ, ಎಸ್.ಎಂ. ಅಗಡಿ, ವಿವೇಕಾನಂದಗೌಡ ಪಾಟೀಲ, ಸಂಜೀವಿನಿ ಕೂಲಗುಡಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಹಿಂಗಾರಿ ಜೋಳದ ಕ್ಷೇತ್ರೋತ್ಸವ, ಪ್ರಾತ್ಯಕ್ಷಿಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಐ.ಸಿ.ಎ.ಆರ್-ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹುಲಕೋಟಿ ವತಿಯಿಂದ ರಾಷ್ಟ್ರೀಯ ಹವಾಮಾನ ವೈಪರಿತ್ಯ ಸೈರಣಾ ಕೃಷಿ ಯೋಜನೆ (ನಿಕ್ರಾ) ಅಡಿಯಲ್ಲಿ ಮುಂಡರಗಿ ತಾಲೂಕಿನ ಶಿಂಗಟರಾಯನಕೇರಿ ಗ್ರಾಮದಲ್ಲಿ ಹಿಂಗಾರಿ ಜೋಳದ ಎಸ್.ಪಿ.ವಿ-2217 ತಳಿಯ ಕ್ಷೇತ್ರೋತ್ಸವ ಹಾಗೂ ಡ್ರೋನ್ ಸಿಂಪರಣಾ ಯಂತ್ರದ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮದ ರೈತರಾದ ಮಂಜಪ್ಪ ಅಬ್ಬಿಗೇರಿ ಇವರ ಹೊಲದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕ್ಷೇತ್ರೋತ್ಸವದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯ ಮಣ್ಣು ವಿಜ್ಞಾನಿ ಎನ್.ಎಚ್. ಭಂಡಿ ಮಾತನಾಡಿ, ಹಿಂಗಾರಿ ಜೋಳದ ಎಸ್.ಪಿ.ವಿ-2217 ತಳಿಯು ಕಪ್ಪು ಕಾಂಡ ಕೊಳೆ ರೋಗ ನಿರೋಧಕವಾಗಿದ್ದು, ಹೆಚ್ಚು ಇಳುವರಿ ಕೊಡುತ್ತದೆ ಹಾಗೂ ಸಮಗ್ರ ಬೆಳೆ ನಿರ್ವಹಣೆ ಅನುಸರಿಸಿ ಕೀಟ ಬಾಧೆಯನ್ನು ಹತೋಟಿಯಲ್ಲಿಡಬೇಕು ಎಂದು ಮಾಹಿತಿ ನೀಡಿದರು.

ರೈತ ಮುಖಂಡ ಶಂಕರಗೌಡ ಪಾಟೀಲ ಮಾತನಾಡಿ, ಎಸ್.ಪಿ.ವಿ-2217 ತಳಿಯು ಬರ ಪರಿಸ್ಥಿತಿಯ ನಡುವೆಯೂ ಉತ್ತಮ ಬೆಳವಣಿಗೆ ಹೊಂದಿದ್ದು ಅಧಿಕ ಇಳುವರಿಯನ್ನು ಗ್ರಾಮದ ರೈತರು ನಿರೀಕ್ಷಿಸುತ್ತಿದ್ದಾರೆ ಎಂದು ಆಶಯ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ನಿಕ್ರಾ ಯೋಜನೆಯ ತಂತ್ರಜ್ಞಾನ ಪ್ರಾತ್ಯಕ್ಷಿಕೆ ಅಡಿ ಡ್ರೋನ್ ಸಿಂಪರಣಾ ಯಂತ್ರದ ಪ್ರಾತ್ಯಕ್ಷಿಕೆಯನ್ನು ಸಹ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಕೃಷಿ ಇಂಜಿನಿಯರಿಂಗ್ ವಿಜ್ಞಾನಿ ಡಾ.ವಿನಾಯಕ ನಿರಂಜನ್ ಡ್ರೋನ್ ಸಿಂಪರಣಾ ಯಂತ್ರದ ಸಹಾಯದಿಂದ ರೈತರು ಕಡಿಮೆ ಅವಧಿಯಲ್ಲಿ ಸಿಂಪರಣಾ ಕಾರ್ಯ ಕೈಗೊಳ್ಳಬಹುದು ಹಾಗೂ ಕೂಲಿಯಾಳಿನ ಮೇಲಿನ ಅವಲಂಬನೆ ಕಡಿಮೆ ಮಾಡಬಹುದು ಎಂದು ತಿಳಿಸಿದರು.

ಫೌಲರ್ ವೆಸ್ಟ್ರಪ್ ಕಂಪನಿಯ ಮಹೇಶ ಗದ್ದಿಗೌಡರ್ ಹಾಗೂ ಅವರ ತಂಡ ಡ್ರೋನ್ ಸಿಂಪರಣಾ ಯಂತ್ರದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು.

ಕ್ಷೇತ್ರೋತ್ಸವ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಶಿಂಗಟರಾಯನಕೇರಿ ಗ್ರಾಮದ 44 ಜನ ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

# ವಿದ್ಯುತ್ ಗುತ್ತಿಗೆದಾರರ ಸಮಸ್ಯೆ ಪರಿಹಾರಕ್ಕೆ ಸಚಿವರ ಬಳಿ ನಿಯೋಗ

■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯುತ್ ಗುತ್ತಿಗೆದಾರರ ಸಮಸ್ಯೆ ಪರಿಹಾರಕ್ಕೆ ಇಂಧನ ಸಚಿವರ ಬಳಿ ನಿಯೋಗ ಕೊಂಡೊಯ್ಯಲಾಗುವುದು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಶುಕ್ರವಾರ ನಗರದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅನುಮತಿ ಪಡೆದ ಗುತ್ತಿಗೆದಾರರ ಸಂಘ ಬೆಂಗಳೂರು, ಜಿಲ್ಲಾ ಸಮಿತಿ ಆಶ್ರಯದಲ್ಲಿ 2024ನೇ ಸಾಲಿನ ತಾಂತ್ರಿಕ ದಿನಚರಿ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಚಿವರ ಬಳಿ ಬಿಚ್ಚು ಮನಸ್ಸಿನಿಂದ ಮಾತಾಡಿ, ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಲಾಗುವುದು. ಅಲ್ಲದೇ ಸಂಘದ ಸದಸ್ಯರು ನೀಡಿರುವ ಸಲಹೆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಅದರಲ್ಲೂ ರೈತರಿಗೆ ತೊಂದರೆ ಆಗದಂತ ಸಲಹೆಯನ್ನು ಸ್ವೀಕರಿಸಿ, ಸರಕಾರ ಮತ್ತು ಗುತ್ತಿಗೆದಾರರ ಒಟ್ಟಾಗಿ ಸಮಸ್ಯೆ ಪರಿಹಾರಕ್ಕೆ ಮುಂದಾಗೋಣ ಎಂದರು.

ಹೆಸ್ಕಾಂ ಸಂಸ್ಥೆ ಬಡವರಿಗೆ ಉಚಿತವಾಗಿ ವಿದ್ಯುತ್ ಕೊಟ್ಟರೂ ಲಾಭದಲ್ಲಿ ನಡೆಯುವಂತೆ ನಮ್ಮ ಸರಕಾರ ಮಾಡಿದೆ. ಪವನ ವಿದ್ಯುತ್, ಕಲ್ಲಿದ್ದಲು, ಸೋಲಾರ್ ಶಕ್ತಿ ಕುಂದಿತು. ಖಾಸಗಿಯವರು ದರ ಹೆಚ್ಚಿಸಿದರು. ಅಂಥ ಕಠಿಣ ಸನ್ನಿವೇಶದಲ್ಲೂ ಸರಕಾರ ಗ್ಯಾರಂಟಿ ಕಾರ್ಯಕ್ರಮ ಜಾರಿ ಮಾಡಿದೆ. ಆ ಕಾರ್ಯಕ್ಕೆ ವಿದ್ಯುತ್ ಗುತ್ತಿಗೆದಾರರ ಸಹಕಾರವೂ ಸಾಕಷ್ಟಿದೆ ಎಂದರು.

ರಾಜ್ಯದ 203 ತಾಲೂಕುಗಳಿಂದ ಹಾಗೂ ಜಿಲ್ಲಾ ಕೇಂದ್ರಗಳಿಂದ ಆಗಮಿಸಿದ್ದ ವಿದ್ಯುತ್ ಗುತ್ತಿಗೆದಾರರು ಪಾಲ್ಗೊಂಡಿದ್ದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಂಕ್ರಣ್ಣ ಸಂಕಣ್ಣವರ ತಂಡದಿಂದ ಜನಪದ ಗೀತೆಗಳು ಜರುಗಿದವು. ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರಿಗೆ



ಬೆಳ್ಳಿ ಕಿರೀಟ ಹಾಗೂ ಮೂರುವರೆ ಲಕ್ಷ ರೂ. ದೇಣಿಗೆ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಅಂಧ ಅನಾಥ ಮಕ್ಕಳಿಗೆ ದಾರಿ ದೀಪವಾದ ವೀರೇಶ್ವರ ಪುಣ್ಯಾಶ್ರಮ ಇತಿಹಾಸ ಕುರಿತು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಕಿಂದ್ರಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ಬಾಲಪ್ಪನವರ, ತಾಂತ್ರಿಕ ದಿನಚರಿ ಚೇರ್ಮನ್ ಮಲ್ಲಿಕಾರ್ಜುನ ಸಿ.ವಿ., ಸಿ.ವಿ.ಮಲ್ಲಿಕಾರ್ಜುನ, ಸೋಮಕುಂಡಲ ರೆಡ್ಡಿ, ಎಂ.ಜೆ. ನಾಗಮಂಗಲಂ, ಕೆ.ವಿ. ನಾಗರಾಜ, ಶ್ರೀಕಾಂತ ಸಸಾಲಟ್ಟಿ, ಭಾನಾವತಿ ರಾಮಚಂದ್ರ, ಅಪ್ಪಣ್ಣ ಇನಾಮತಿ, ಪ್ರಕಾಶ ಅಂಗಡಿ, ವಿಜಯಕುಮಾರ ಗುಡ್ಡದ, ಆಂಧ್ರಪ್ರದೇಶದ ನಾರಾಯಣ, ಶಿವರಾಜ ಐ.ಬಿ., ಆನಂದ ಹಾದಿಮನಿ, ಎಂ. ಕೃಷ್ಣ, ಈಶ್ವರಪ್ಪ, ಟಿ.ಎ. ಚಂದ್ರಪ್ಪ ಇತರರು ಉಪಸ್ಥಿತರಿದ್ದರು.

### ಸಂಕ್ರಾಂತಿಗೆ ಸೌತ್ ಇಂಡಿಯನ್ ಸಂಘ ಅಸ್ತಿತ್ವ

ದಕ್ಷಿಣದ 5 ರಾಜ್ಯಗಳನ್ನು ಒಳಗೊಂಡಂತೆ ಸೌಥ್ ಇಂಡಿಯನ್ ಇಲೆಕ್ಟ್ರೀಶನ್ ಫೆಡರೇಶನ್ (ವಿದ್ಯುತ್ ಗುತ್ತಿಗೆದಾರರ ಸಂಘ) ಸಂಕ್ರಾತಿ ನಂತರ ಪೂರ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬರಲಿದೆ. ಸಂಘವು ಶತಮಾನೋತ್ಸವವನ್ನು ಕಂಡಿದ್ದರು ರಾಜ್ಯದ ಅನುಮತಿ ವಿದ್ಯುತ್ ಗುತ್ತಿಗೆದಾರರ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅದನ್ನು ಸರಿಪಡಿಸುವಲ್ಲಿ ಸಂಘವು ಕಾರ್ಯ ಪ್ರವೃತ್ತರಾಗಲಿದ್ದು ಇದಕ್ಕಾಗಿ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ರಮೇಶ ಹೇಳಿದರು.

# ಕರವೇ ಅಧ್ಯಕ್ಷರ ಬಿಡುಗಡೆಗೆ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡರ ಬಂಧನವಾಗಿದ್ದು, ಅವರನ್ನು ಕೂಡಲೇ ಬಿಡುಗಡೆಗೊಳಿಸಬೇಕು ಹಾಗೂ ಕರವೇ ಕಾರ್ಯಕರ್ತರ ಮೇಲೆ ಇರುವ ಎಲ್ಲಾ ಪ್ರಕರಣಗಳನ್ನು ವಜಾ ಮಾಡಬೇಕೆಂದು ಸಚಿವ ಎಚ್.ಕೆ. ಪಾಟೀಲರಿಗೆ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಕರವೇ ರಾಜ್ಯ ಕಾರ್ಯದರ್ಶಿ ಹನುಮಂತಪ್ಪ ಹೆಚ್. ಅಬ್ಬಿಗೇರಿ, ಮುಖಂಡರಾದ ಮಾರುತಿ ಇಳಿಗೆರೆ, ಕುಮಾರ ರೇವಣ್ಣವರ, ಕೃಷ್ಣ ಲಮಾಣಿ, ವಿನಾಯಕ ಬದಿ, ಅಜೀಮ್ ಖಾಜಿ, ತೌಶಿಫ ಡಾಲಾಯತ್, ಇರ್ಫಾನ್ ತಾಳಿಕೋಟಿ, ಸಲೀಂ ಸಿರೇವಾಡ, ಇಸಾಕ್ ನದಾಫ್, ದ್ಯಾಮಣ್ಣ ಇಳಿಗೆರೆ, ಶಬ್ಬೀರ್ ಕೊನ್ನೂರ, ಶ್ರೀಕಾಂತ ಪೂಜಾರ, ಅಕ್ಬರ್ ಸರ್ಕಸ್, ಸಲೀಂಸಾಬ್ ಬೋದ್ಲೆಖಾನ, ಕಲಾಂದರ ಖಾಜಿ, ಇರ್ಫಾನ್ ದಂಡಿನ, ಪ್ರಶಾಂತ ನವಲಗುಂದ ಸೇರಿದಂತೆ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಶ್ರೀ ಗುರು ಮೃತ್ಯುಂಜಯ ಅಪ್ಪನವರ ಸ್ಮರಣೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಇಂದು



ಮಣಕವಾಡದ ಮಹಿಮಾ ಪುರುಷ ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣೋತ್ಸವ ಮಾಲಿಕೆ ಕಾರ್ಯಕ್ರಮ ಡಿ.31ರಂದು ಮುಂಜಾನೆ 10.30ಕ್ಕೆ ನಗರದ ಲಖಾನಿ ಆಸ್ಪತ್ರೆ ಎದುರಿಗಿನ ಶ್ರೀ ಮೃತ್ಯುಂಜಯ ಗುರುಕುಲ ಆಶ್ರಮದ ಸಭಾಭವನದಲ್ಲಿ ಜರುಗಲಿದೆ. ಹಿರಿಯ ಸಾಹಿತಿಗಳಾದ ಐ.ಕೆ. ಕಮ್ಮಾರ ಸಮಾರಂಭದ ಅಧ್ಯಕ್ಷತೆ ವಹಿಸುವರು. ಗುರುಸಿದ್ದಪ್ಪ ಸಜ್ಜನರ ಹಾಗೂ ಗುರುಮಾತೆ ಇಂದಿರಾ ಆಸಂಗಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಹಿರೇಹಂದಿಗೋಳದ ಶಿವಶಂಕ್ರಪ್ಪ ಆರಟ್ಟಿ ಭಕ್ತಿಸೇವೆ ವಹಿಸಿಕೊಳ್ಳುವರು. ನಾಗಾವಿಯ ಕೆ.ಬಿ. ಮರಡ್ಡಿ ಗುರುಗಳು, ಮೃತ್ಯುಂಜಯ ಹಟ್ಟಿ, ಶರಣಪ್ಪಗೌಡ್ರು ಬಳ್ಳೊಳ್ಳಿ, ಜಗನ್ನಾಥ ರಾಸಿನಕರ, ಸಂಗಮೇಶ ಬಾದನಾಳ, ಜಕ್ಕನಗೌಡ ಜಕ್ಕನಗೌಡ್ರು, ರಾಯಪ್ಪಜ್ಜ ನಾಗನೂರ, ಶಿವಣ್ಣ ಒಡೆಯರ, ಎಚ್.ಎನ್. ಕುರಿ, ಎಂ.ಡಿ. ದೊಡ್ಡಮನಿ ಉಪಸ್ಥಿತರಿರುವರು. ಈ ಪುಣ್ಯಕಾರ್ಯದಲ್ಲಿ ಪಾಲ್ಗೊಂಡು ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪನ ಕೃಪೆಗೆ ಪಾತ್ರರಾಗಲು ಆಶ್ರಮದ ವಿದ್ಯಾರ್ಥಿಗಳಾದ ಆಲಮ್, ಆಸ್ಲಮ್, ಅಕ್ರಮ್, ಸ್ನೇಹಾ, ಪೂಜಾ, ಲಕ್ಷ್ಮೀ, ಕೋಮಲ್, ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

### ವೀರಶೈವ ಸಮುದಾಯ ಭವನದ ಜನ ಜಾಗೃತಿ ಧರ್ಮ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳು

# ಸಮಾಜದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಬಾಳಿ

■ವಿಜಯಸಾಕ್ಷಿ ಸುದ್ದಿ, ಅರಸೀಕೆರೆ

ಜೀವನದ ಶ್ರೇಯಸ್ಸಿಗೆ ಧರ್ಮಾಚರಣೆ ಮುಖ್ಯ. ಅರಿವು, ಆದರ್ಶಗಳ ಮೂಲಕ ಬದುಕು ಬಲಗೊಳ್ಳಬೇಕು. ಅರಿವಿನ ಕಣ್ಣು ತೆರೆಸಲು ಧರ್ಮ ಮತ್ತು ಗುರು ಕಾರುಣ್ಯ ಅವಶ್ಯಕವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ವೀರಶೈವ ಸಮುದಾಯ ಭವನದಲ್ಲಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಜಗದ ಕತ್ತಲೆ ಕಳೆಯಲು ಸೂರ್ಯ ಬೇಕು. ಬದುಕಿನಲ್ಲಿ ಬರುವ ಅಜ್ಞಾನವೆಂಬ ಕತ್ತಲೆಯನ್ನು ಗುರು ಮಾತ್ರ ಪರಿಹರಿಸಬಲ್ಲ. ಎಲ್ಲ ಧರ್ಮಗಳಲ್ಲಿ ಶ್ರೀ ಗುರುವಿಗೆ ಪ್ರಥಮ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಉತ್ಸಾಹಿ ಯುವಕರು ಹಿರಿಯರ ಮಾರ್ಗ ದರ್ಶನದಲ್ಲಿ ಸಂಘಟಿಸಿರುವ ಈ ಕಾರ್ಯಕ್ರಮ ಎಲ್ಲರಿಗೂ ಹರುಷ ತಂದಿದೆ ಎಂದ ಅವರು, ಸಮಾಜದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಬಾಳಿ ಬದುಕಬೇಕೆಂದು ಶುಭ ಹಾರೈಸಿದರು.

ನೇತೃತ್ವ ವಹಿಸಿದ ದೊಡ್ಡಗುಣಿ ಹಿರೇಮಠದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಆಧುನಿಕತೆ ಮತ್ತು ಸುಧಾರಣೆಯ ನೆಪದಲ್ಲಿ ಧರ್ಮ, ಸಂಸ್ಕೃತಿಗೆ ಧಕ್ಕೆಯಾಗಬಾರದು. ಬೆಳೆಯುವ ಯುವ ಜನಾಂಗದಲ್ಲಿ ಸಂಸ್ಕಾರ-ಸದ್ವಿಚಾರಗಳನ್ನು ಬೆಳೆಸುವುದೇ ಈ ಸಮಾರಂಭದ ಮೂಲ ಉದ್ದೇಶವೆಂದರು. ಹೊನ್ನವಳ್ಳಿ ಶಿವಪ್ರಕಾಶ ಶ್ರೀಗಳು, ಕಾರ್ಜುವಳ್ಳಿ ಸದಾಶಿವ ಶ್ರೀಗಳು, ನುಗ್ಗೇಹಳ್ಳಿ ಡಾ. ಮಹೇಶ್ವರ ಶ್ರೀಗಳು, ಬೀರೂರು ರುದ್ರಮುನಿ ಶ್ರೀಗಳು, ಡಿ.ಎಂ. ಕುರ್ಕೆ ಶಶಿಶೇಖರ ಸಿದ್ಧಬಸವ ಶ್ರೀಗಳು ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು.

ಮಾಜಿ ಶಾಸಕ ಕೆ.ಪಿ. ಪ್ರಭುಕುಮಾರ 2024ನೇ ಸಾಲಿನ ದಿನದರ್ಶಿಕೆ ಬಿಡುಗಡೆ ಮಾಡಿ ಮಾತನಾಡಿದರು. ಮಾಜಿ ಶಾಸಕ ಜಿ.ಎಸ್. ಪರಮೇಶ್ವರಪ್ಪನವರು ವೀರಶೈವ ಹಿರಿಮೆಯ ಬಗೆಗೆ ಮಾತನಾಡಿದರು. ಟಿ.ಎನ್. ರುದ್ರಯ್ಯ, ಮಠದ ಗಂಗಾಧರಯ್ಯ, ತೇಜಸ್, ಕೆ.ಪಿ. ಗುರುಲಿಂಗಯ್ಯ, ಕೆ.ಎಂ. ಕೊಟ್ರೇಶಕುಮಾರ್, ಡಾ. ಬಿ.ಸಿ. ನಳಿನಿ, ಎಸ್.ಹೆಚ್. ರಾಜಶೇಖರ, ಸುಮಿತ್ರ, ಡಾ. ರೇಣುಕ ಬಂಗಾರಿ ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಶಾಸಕ ಕೆ.ಎಂ. ಶಿವಲಿಂಗೇಗೌಡರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ದಾನಿಗಳಿಗೆ ಮತ್ತು ಗಣ್ಯರಿಗೆ ಗುರುರಕ್ಷೆಯಿತ್ತು ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ವೀರಶೈವ ಮಹಿಳಾ ಸಮಾಜ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಿಳಾ ಸಮಾಜದವರಿಂದ ಭಕ್ತಿಗೀತೆ ಜರುಗಿ-ತು. ಪೂಜಾ ಸಮಿತಿ ಅಧ್ಯಕ್ಷ ಸಿ.ಜೆ. ರಾಜು ಸರ್ವರನ್ನು ಸ್ವಾಗತಿಸಿದರು. ಕೆ.ಎಸ್. ಲೋಕೇಶಕುಮಾರ್, ಸಿದ್ಧೇಶ ಶಾಸ್ತ್ರಿಗಳು, ಮಹೇಶ್ವರಯ್ಯ ಶಿಕ್ಷಕರು ಮತ್ತು ನಾಗಭೂಷಣಸ್ವಾಮಿ ಇವರೆಲ್ಲರೂ ಸಂಯುಕ್ತವಾಗಿ ನಿರೂಪಿಸಿದರು.

ಲೋಕಕಲ್ಯಾಣಾರ್ಥವಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಶುಭ ಹಾರೈಸಿದರು. ಸಮಾರಂಭದ ನಂತರ ಅನ್ನ ದಾಸೋಹ ಜರುಗಿತು.



ಮಲಿನಗೊಂಡ ಮನಸ್ಸು ಪರಿಶುದ್ಧಗೊಳ್ಳಲು ಸಂಸ್ಕಾರ-ಸದ್ವಿಚಾರಗಳ ಅರಿವು ಬೇಕು. ತನುವೆಂಬ ತೋಟದಲ್ಲಿ ಆಧ್ಯಾತ್ಮದ ಕೃಷಿಗೈದು ಜೀವನದಲ್ಲಿ ಶಾಂತಿ, ನೆಮ್ಮದಿಯನ್ನು ಪಡೆಯಲು ಸಾಧ್ಯ. ಮನುಷ್ಯ ಜೀವನದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಲ್ಲಿ ಒಂದನ್ನಾದರೂ ಸಂಪಾದಿಸಿಕೊಳ್ಳದಿದ್ದರೆ ಬದುಕು ಬಲಹೀನಗೊಳ್ಳುತ್ತದೆ. ಸಂಪತ್ತು ಮತ್ತು ಬಯಕೆ ಬಯಸುವ ಮನುಷ್ಯ ಮೊದಲಿಗೆ ಧರ್ಮಾಸಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಸುಖದ ಮೂಲ ಧರ್ಮಾಚರಣೆಯಲ್ಲಿದೆ ಎಂದು ವ್ಯಾಸ ಮಹರ್ಷಿಗಳು ಹೇಳಿದ್ದುಂಟು. ವೀರಶೈವ ಧರ್ಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಅತ್ಯಮೂಲ್ಯವಾದ ಧರ್ಮದ ದಶವಿಧ ಸೂತ್ರಗಳನ್ನು ಬೋಧಿಸಿ ಸಕಲರನ್ನು ಉದ್ಧರಿಸಿದ್ದಾರೆ.

– ಡಾ.ವೀರಸೋಮೇಶ್ವರ ಜಗದ್ಗುರುಗಳು.
ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

### ನೂರಅಹ್ಮದ್ ಮಕಾನದಾರ ಅಧ್ಯಕ್ಷ, ದೇವಪ್ಪ ಲಿಂಗದಾಳ ಕಾರ್ಯದರ್ಶಿ

# ದಿನಪತ್ರಿಕೆಗಳ ಸಂಪಾದಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ





■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಗದಗ ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಗರದ ಕಿತ್ತೂರು ಕರ್ನಾಟಕ ದಿನಪತ್ರಿಕೆ ಕಾರ್ಯಾಲಯದಲ್ಲಿ ಸಂಪಾದಕ ಹಾಗೂ ಸಂಘದ ರಾಜ್ಯ ಉಪಾಧ್ಯಕ್ಷ ಮಂಜುನಾಥ ಅಬ್ಬಿಗೇರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು.

ಜಿಲ್ಲಾಧ್ಯಕ್ಷರಾಗಿ ನೆಲದನುಡಿ ಪತ್ರಿಕೆ ಸಂಪಾದಕ ನೂರಅಹ್ಮದ್ ಅ. ಮಕಾನದಾರ, ಉಪಾಧ್ಯಕ್ಷರಾಗಿ ಚಕ್ರವರ್ತಿ ಪತ್ರಿಕೆ ಸಂಪಾದಕ ಎನ್.ಆರ್. ಭಾಂಡಗೆ, ಪ್ರಧಾನ ಕಾರ್ಯದರ್ಶಿಯಾಗಿ ವೇರಿ ಗುಡ್‌ಮಾರ್ನಿಂಗ್ ಪತ್ರಿಕೆ ಸಂಪಾದಕ ದೇವಪ್ಪ ಎನ್. ಲಿಂಗದಾಳ ಹಾಗೂ ಖಜಾಂಚಿಯಾಗಿ ಉತ್ತರಪ್ರಭ ಪತ್ರಿಕೆಯ ರವಿಕಾಂತ ಅಂಗಡಿ ಅವರನ್ನು ಆಯ್ಕೆ ಮಾಡಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ನಾಗರಿಕ ಪತ್ರಿಕೆ ಸಂಪಾದಕ ಅಜಿತಕುಮಾರ ಬ. ಹೊಂಬಾಳಿ, ವಿಜಯಸಾಕ್ಷಿ ಪತ್ರಿಕೆ ಸಂಪಾದಕ ಎಚ್.ಎಮ್. ಶರೀಫನವರ್, ರತ್ನಾಕರವಾಣಿ ಪತ್ರಿಕೆ ಸಂಪಾದಕ ಜಗದೀಶ ಪೂಜಾರ, ಪ್ರಜಾಪಥ ಪತ್ರಿಕೆಯ ಸಂಪಾದಕಿ ಆರ್.ಆರ್. ಹೆಬ್ಬಳ್ಳಿ ಅವರನ್ನು ನೇಮಕ ಮಾಡಲಾಯಿತು.

ಈ ವೇಳೆ ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಉಪಾಧ್ಯಕ್ಷ ಮಂಜುನಾಥ ಬಸಪ್ಪ ಅಬ್ಬಿಗೇರಿ, ರಾಜ್ಯದಲ್ಲಿ ಸಣ್ಣ ಹಾಗೂ ಮದ್ಯಮ ಪತ್ರಿಕೆಗಳು ಸಂಕಷ್ಟ ಎದುರಿಸುತ್ತಿವೆ.

ಈ ನಿಟ್ಟಿನಲ್ಲಿ ಸಂಘಟಿತ ಪ್ರಯತ್ನದಿಂದ ನಮ್ಮ ಹಕ್ಕು ಪಡೆದುಕೊಳ್ಳಲು ನಾವೆಲ್ಲ ಸಂಘದ ಮೂಲಕ ಒಂದಾಗಬೇಕಿದೆ. ಇಂದು ಪತ್ರಿಕೆಗಳನ್ನು ನಡೆಸುವುದೇ ಕಷ್ಟಕರವಾಗಿರುವ ವಾತಾವರಣ ನಿರ್ಮಾಣವಾಗಿದ್ದು, ಈ ಹಂತದಲ್ಲಿ ಸರ್ಕಾರದ ಹಂತದಲ್ಲಿ ನಮ್ಮ ಬೇಡಿಕೆ ಈಡೇರಿಕೆಗೆ ಸಂಘದ ಮೂಲಕ ಪ್ರಯತ್ನಿಸೋಣ. ಸಣ್ಣ ಹಾಗೂ ಮದ್ಯಮ ಪತ್ರಿಕೆಗಳು ಎದುರಿಸುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಸಂಘದ ಅವಶ್ಯಕತೆ ಇದೆ ಎಂದರು.


# ನೀರು ಪೂರೈಕೆಯಲ್ಲಿ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಮುಂಡರಗಿ ತಾಲೂಕಿನ ಜಾಲವಾಡಗಿ ಗ್ರಾಮದಲ್ಲಿರುವ ನೀರು ಶುದ್ಧೀಕರಣ ಘಟಕದಲ್ಲಿ ಕೊಳವೆ ಮಾರ್ಗ (ಮೇನ್‌ಲೈನ್) ಕಾಮಗಾರಿಯು ದುರಸ್ಥಿ ಕಾರ್ಯ ಕೈಗೊಳ್ಳುವದು ಅವಶ್ಯವಿದೆ. ಜನವರಿ 1 ಮತ್ತು 2 ರಂದು (ಎರಡು ದಿನಗಳ ಕಾಲ) ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಯ 212 ಜನವಸತಿಗಳಿಗೆ ಹಾಗೂ ಮುಂಡರಗಿ ಪಟ್ಟಣಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಷ್ಟಾಚಾರ ಪಾಲಿಸುವಂತೆ ಸಭಾಪತಿ ಬಸವರಾಜ ಹೊರಟ್ಟಿ ಪತ್ರ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ



ಕರ್ನಾಟಕ ವಿಧಾನಸಭೆಯ ಸದಸ್ಯರನ್ನು ಶಾಸಕರೆಂದು ಸಂಭೋದಿಸುವ ರೀತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಶಾಸಕರೆಂದು ಸಂಭೋದಿಸುವುದರ ಜೊತೆ-ಗೆ ಸರ್ಕಾರದ ಆಮಂತ್ರಣ ಪತ್ರಿಕೆಗಳಲ್ಲಿ ಇದೇ ರೀತಿ ಉಲ್ಲೇಖಿಸಿ ಶಿಷ್ಟಾಚಾರ ನಿಯಮವನ್ನು ಪಾಲಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.


ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರನ್ನು ಅಧಿಕಾರಿ ವರ್ಗದವರು ತಾರತಮ್ಯದಿಂದ ಕಾಣುತ್ತಿರುವುದು ಗಮನಕ್ಕೆ ಬಂದಿದೆ. ವಿಧಾನಸಭೆಯ ಸದಸ್ಯರನ್ನು ಶಾಸಕರೆಂದು ಹಾಗೂ ವಿಧಾನ ಪರಿಷತ್ತಿನ ಸದಸ್ಯರನ್ನು ವಿಧಾನ ಪರಿಷತ್ತಿನ ಸದಸ್ಯರೆಂದೇ ಸಂಭೋಧಿಸುತ್ತಿದ್ದು, ಸರ್ಕಾರದ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳಲ್ಲಿ ವಿಧಾನ ಸಭೆಯ ಸದಸ್ಯರನ್ನು ಶಾಸಕರೆಂದು ಹಾಗೂ ವಿಧಾನ ಪರಿಷತ್ತಿನ ಸದಸ್ಯರನ್ನು ವಿಧಾನ ಪರಿಷತ್ತಿನ ಸದಸ್ಯರೆಂದೇ ಮುದ್ರಿಸಲಾಗುತ್ತಿರುವುದು ಕಂಡು ಬರುತ್ತಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಈ ಹಿಂದೆ ಹಲವಾರು ಬಾರಿ ಈ ವಿಷಯದ ಕುರಿತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸರ್ಕಾರದಿಂದ ಆದೇಶ ಹೊರಡಿಸಿದ್ದರೂ ಸಹ ಸೂಕ್ತವಾಗಿ ಪಾಲನೆಯಾಗುತ್ತಿಲ್ಲ ಎನ್ನುವುದು ವಿಷಾದನೀಯ ಸಂಗತಿ ಎಂದು ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

ಈ ಕ್ಷಣದಿಂದಲೇ ಉಭಯ ಸದನಗಳ ಸದಸ್ಯರುಗಳನ್ನು ಶಾಸಕರು, ವಿಧಾನ ಸಭೆ ಮತ್ತು ಶಾಸಕರು ವಿಧಾನ ಪರಿಷತ್ತು ಎಂದು ಸಂಬೋಧಿಸುವುದರ ಜೊತೆಗೆ ಸರ್ಕಾರದ ಆಮಂತ್ರಣ ಪತ್ರಿಕೆಗಳಲ್ಲಿ ಇದೇ ರೀತಿ ಉಲ್ಲೇಖಿಸಿ ಶಿಷ್ಟಾಚಾರ ನಿಯಮವನ್ನು ಪಾಲಿಸುವಂತೆ ನಿರ್ದೇಶನ ನೀಡಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಭಾಪತಿ ಬಸವರಾಜ ಹೊರಟ್ಟಿ ಸೂಚನೆ ನೀಡಿದ್ದಾರೆ.

# ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಮಾಡಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ನಿರ್ಮಾಣಗೊಂಡು ಅದ್ದೂರಿಯಾಗಿ ಉದ್ಘಾಟನೆಗೆ ಸಿದ್ದತೆಗಳು ನಡೆಯುತ್ತಿರುವುದು ನಮಗೂ ಸಂತಸ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಮಾಡಲಿ. ಆದರೆ ಉದ್ಘಾಟನೆಗೆ ಅಧಿಕೃತವಾಗಿ ಯಾರಿಂದಲೂ ಆಹ್ವಾನ ಬಂದಿಲ್ಲ. ಬಂದಾಗ ನೋಡೋಣ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಅವರು ಶನಿವಾರ ಲಕ್ಷ್ಮೇಶ್ವರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಸ್ಕೂಲ್ ಚಂದನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಮಹಾಕಾವ್ಯ ರಾಮಾಯಣ ಪರಿಚಯಿಸಿದ ಮಹರ್ಷಿ ವಾಲ್ಮೀಕಿ ಅವರ ಮಂದಿರವನ್ನು ರಾಮಮಂದಿರದ ಪಕ್ಕದಲ್ಲಿ ನಿರ್ಮಾಣಕ್ಕೆ ಬೇಡಿಕೆ ಇಟ್ಟಿದ್ದೇವೆ. ಆದರೆ ವಿಮಾನ ನಿಲ್ದಾಣಕ್ಕೆ ವಾಲ್ಮೀಕಿ ಮಹರ್ಷಿಯವರ ಹೆಸರು ಇಟ್ಟಿರುವದು ಸ್ವಲ್ಪ ತೃಪ್ತಿಕರ ಸಂಗತಿಯಾಗಿದೆ ಎಂದರು.

ಈ ಹಿಂದೆ ಬಿಜೆಪಿ ಸರಕಾರದಲ್ಲಿ ನಡೆದ ಅವ್ಯವಹಾರದ ಬಗ್ಗೆ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರೇ ಆರೋಪ ಮಾಡಿರುವ ಕುರಿತು ಪ್ರತಿಕ್ರಿಯಿಸಿ, ಈ ಬಗ್ಗೆ ತನಿಖೆ ನಡೆಯುತ್ತಿದೆ. ಆರೋಪದ ಸತ್ಯಾಸತ್ಯತೆಗಳ ಬಗ್ಗೆ ಯತ್ನಾಳ ಅವರನ್ನೇ ಕೇಳಬೇಕು ಎಂದು ಹೇಳಿದರು. ಡಿಸಿಎಂ ಸ್ಥಾನದ ಕುರಿತು ತಾವೂ ಬೇಡಿಕೆ ಇಟ್ಟಿದ್ದು, ತೀರ್ಮಾನ ಹೈಕಮಾಂಡ್‌ಗೆ ಸೇರಿದ್ದು ಎಂದರು.

ಜಾತಿ ಗಣತಿ ಕುರಿತು ನಿಮ್ಮ ಪಕ್ಷದಲ್ಲಿಯೇ ವಿರೋದ ವ್ಯಕ್ತವಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಜಾತಿಗಣತಿ ಮಾಹಿತಿಯೇ ಬಿಡುಗಡೆಯಾಗಿಲ್ಲ. ಬಿಡುಗಡೆಯ ಬಳಿಕ ಅದು ಸರಿ ಇದ್ದರೆ ಸ್ವೀಕರಿಸುತ್ತೇವೆ ಇಲ್ಲದಿದ್ದಲ್ಲಿ ನಾವು ವಿರೋಧ ಮಾಡುತ್ತೇವೆ ಎಂದರು.

ಈ ವೇಳೆ ಟಿ.ಈಶ್ವರ, ಸತೀಶಗೌಡ ಪಾಟೀಲ, ವಿಜಯ ಕರಡಿ, ಯಲ್ಲಪ್ಪ ತಳವಾರ, ರಾಜಣ್ಣ ಹೊಳಲಾಪೂರ ಮುಂತಾದವರಿದ್ದರು.

# ಶರಣ ಸಂಗಮ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ರವಿವಾರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1574ನೇ ಶರಣ ಸಂಗಮದಲ್ಲಿ ಬಸವಾದಿ ಶರಣರ ವಚನಗಳಲ್ಲಿ ಮೂಢಾಚರಣೆಗಳ ನಿರಾ-ಕರಣೆ ಹಾಗೂ ಬ್ರಹ್ಮಾಂಡಗತ ಸೃಷ್ಟಿ ವಿಕಾಸ, ಪಿಂಡಾಂಡಗತ ಸೃಷ್ಟಿ ವಿಕಾಸ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಶರಣ ಎನ್.ಎಚ್. ಹಿರೇಸಕ್ಕರಗೌಡ್ರ ವಹಿಸುವರು. ಅತಿಥಿಗಳಾಗಿ ಶರಣೆ ರಾಜೇಶ್ವರಿ, ಶರಣ ರವಿಕುಮಾರ ಬಿ.ಎಸ್. ಹಾಗೂ ಶರಣೆ ಲಿಂಗಾಕ್ಷಿ, ಶರಣ ಸುನೀಲ ಎಸ್.ಜಿ. ಆಗಮಿಸುವರು. ಶರಣ ಪಿ.ಟಿ. ಅಸುಂಡಿ, ಶರಣ ಎಸ್.ಎ. ಮುಗದ ಉಪನ್ಯಾಸ ಮಾಡುವರು.

ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಎಂ.ಆರ್. ಜಿನಗಾ ವಿನಂತಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka